ಬೃಹನ್ನಾರದೀಯ ಪುರಾಣೋಕ್ತ

# ಅಧಿಕಮಾಸ ವಿಧಿ-ವಿಧಾನಗಳು

(ಪುರುಷೋತ್ತಮ ಮಾಸದಲ್ಲಿ ಆಚರಿಸಲೇಬೇಕಾದ ಪೂಜಾ, ದಾನಾದಿಗಳನ್ನು ತಿಳಿಸುವ ಕೃತಿ)

ಸಂಗ್ರಹಕಾರರು

**ವಿದ್ವಾನ್ ಕೆ. ಸತ್ಯನಾರಾಯಣಾಚಾರ್ಯರು**

ಮಾಧ್ವವೇದಾಂತ ಪಾಠಶಾಲಾ

ರಾಜಾಜಿನಗರ, ಬೆಂಗಳೂರು

ಪ್ರಕಾಶಕರು

**ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ**

**ಶ್ರೀರಾಘವೇಂದ್ರಸ್ವಾಮಿಗಳವರ ಮಠ**

ಮಂತ್ರಾಲಯ

## ಶಾಸ್ತ್ರವ್ಯಾಸಂಗ ಮಾಡಬೇಕೆನ್ನುವವರಿಗೆ ಒಂದು ಸದವಕಾಶ

ಪರಮಪೂಜ್ಯ ಶ್ರೀಶ್ರೀಪಾದಂಗಳವರ ಆಜ್ಞೆಯ ಮೇರೆಗೆ ಬೆಂಗಳೂರಿನ ಶ್ರೀಗುರುಸಾರ್ವಭೌಮ ಕಛೇರಿಯ ಸಂಕೀರ್ಣದಲ್ಲಿ ಶಾಸ್ತ್ರಪಾಠವನ್ನು ಹೇಳುವ ವ್ಯವಸ್ಥೆಯನ್ನು ಮಾಡಲಾಗಿದೆ. ಆಸಕ್ತರು ಕಾವ್ಯ ಮತ್ತು ಶಾಸ್ತ್ರ ಎರಡನ್ನೂ ವ್ಯಾಸಂಗ ಮಾಡಬಹುದು. ಚಾಮರಾಜಪೇಟೆಯ ಮತ್ತು ಸುತ್ತಮುತ್ತಲಿನ ವಾಸಿಗಳು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳ-ಬಹುದು. ನಿವೃತ್ತರಿಗೆ ಇದೊಂದು ವಿಶೇಷ ಅವಕಾಶ. ಸಂಜೆ 5.30 ರಿಂದ 7.00 ಗಂಟೆಯವರೆಗೆ ಪಾಠದ ವ್ಯವಸ್ಥೆಯನ್ನು ಮಾಡಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಸಂಪಾದಕೀಯ ಕಛೇರಿಯನ್ನು ಸಂಪರ್ಕಿಸಬಹುದು.

ನಿಲಯ ಸಂಯೋಜಕರು

ಶ್ರೀಗುರುಸಾರ್ವಭೌಮ ಮಾಸಪತ್ರಿಕೆ ಕಾರ್ಯಾಲಯ

ನಂ. 19/20, 'ಶ್ರೀಮೂಲರಾಮ'

2ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ಚಾಮರಾಜಪೇಟೆ

ಬೆಂಗಳೂರು - 560 018. ದೂ. 26606080

Printed at : **Sathyashri Printers,** Chamarajpet, Bangalore - 560 018. ✆ 26525736

ಬೃಹನ್ನಾರದೀಯ ಪುರಾಣೋಕ್ತ

# ಅಧಿಕಮಾಸ ವಿಧಿ-ವಿಧಾನಗಳು

(ಪುರುಷೋತ್ತಮ ಮಾಸದಲ್ಲಿ ಆಚರಿಸಲೇಬೇಕಾದ ಪೂಜಾ, ದಾನಾದಿಗಳನ್ನು ತಿಳಿಸುವ ಕೃತಿ)


ಸಂಗ್ರಹಕಾರರು

**ವಿದ್ವಾನ್ ಕೆ. ಸತ್ಯನಾರಾಯಣಾಚಾರ್ಯರು**

ಮಾಧ್ವವೇದಾಂತ ಪಾಠಶಾಲಾ

ರಾಜಾಜಿನಗರ, ಬೆಂಗಳೂರು



ಪ್ರಕಾಶಕರು

**ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ**

**ಶ್ರೀರಾಘವೇಂದ್ರಸ್ವಾಮಿಗಳವರ ಮಠ**

ಮಂತ್ರಾಲಯ





**Bruhannaradeeya Puranokta Adhikamasa Vidhi-Vidhanagalu.**
Edited by Vidwan K. Satyanarayanacharya, Bangalore and Published by Jagadguru Srimanmadhwacharya Moolamaha Samsthana, Sri Raghavendraswamy Matha, Mantralayam.

ಮೊದಲ ಮುದ್ರಣ : 2004

ಪುಟಗಳು : x + 28

ಬೆಲೆ :

ಹಕ್ಕುಗಳು : ಪ್ರಕಾಶಕರದ್ದು

ಅಕ್ಷರ ಜೋಡಣೆ : **ಶ್ರೀಗುರುಸಾರ್ವಭೌಮ ವಿದ್ಯುನ್ಮಾನ ಮುದ್ರಣಾಲಯ**
'ಶ್ರೀಮೂಲರಾಮ', ನಂ. 19/20
5ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ
ಚಾಮರಾಜಪೇಟೆ, ಬೆಂಗಳೂರು - 560 018
✆ 26606080

ಮುದ್ರಕರು : **ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.,**
ನಂ. 162, 5ನೇ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು - 560 018
ದೂರವಾಣಿ : 26525736

# ಗ್ರಂಥ ಸಮರ್ಪಣೆ

ಶ್ರೀಶ್ರೀಮದ್ರಾಘವೇಂದ್ರತೀರ್ಥರ ಅನುಗ್ರಹದಿಂದ ಸಂಗ್ರಹೀತವಾದ ಈ 'ಅಧಿಕಮಾಸದ ವಿಧಿ-ವಿಧಾನಗಳು' ಎಂಬ ಸಣ್ಣ ಪ್ರತಿಯನ್ನು ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಪದವಾಕ್ಯ ಪ್ರಮಾಣ ಪಾರಾವಾರ ಪಾರಂಗತ ಸರ್ವತಂತ್ರ ಸ್ವತಂತ್ರ ಶ್ರೀಮದ್ವೈಷ್ಣವ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯ, ಶ್ರೀಮನ್ಮೂಲ ರಘುಪತಿ ವೇದವ್ಯಾಸದೇವ, ದಿವ್ಯ ಶ್ರೀಪಾದ-ಪದ್ಮಾರಾಧಕ ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನಾಧೀಶ್ವರ ಶ್ರೀರಾಘವೇಂದ್ರ ಗುರುಸಾರ್ವಭೌಮ ಮಠೀಯ ವೇದಾಂತ ಸಾಮ್ರಾಜ್ಯ ವಿದ್ಯಾಸಿಂಹಾಸನಾಧೀಶ್ವರ ಶ್ರೀಮತ್ಸುಯಮೀಂದ್ರತೀರ್ಥ ಶ್ರೀಪಾದಕರಕಮಲಸಂಜಾತ ಶ್ರೀಮತ್ಸುಜಯೀಂದ್ರತೀರ್ಥ ಶ್ರೀಪಾದಂಗಳವರ ವರಕುಮಾರಕರಾದ ಶ್ರೀ ಶ್ರೀ ೧೦೦೮ ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರ ಪಾದಪದ್ಮಗಳಲ್ಲಿ ಭಕ್ತಿ, ಶ್ರದ್ಧಾಪೂರ್ವಕವಾಗಿ ಸಮರ್ಪಿಸಲಾಗಿದೆ.

ಶ್ರೀಪಾದರ ಚರಣಸೇವಕ

**ಕೆ. ಸತ್ಯನಾರಾಯಣಾಚಾರ್ಯ**

ಮಾಧ್ವವೇದಾಂತ ಪಾಠಶಾಲಾ

ರಾಜಾಜಿನಗರ, ಬೆಂಗಳೂರು



# ಆಶೀರ್ವಾದಗಳು

## ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಸ್ವಸ್ತಿಶ್ರೀ ವಿಜಯಾಭ್ಯುದಯ ಗತ ಶಾಲಿವಾಹನಶಕ ೧೯೨೬ನೇ

ಶ್ರೀತಾರಣನಾಮ ಸಂವತ್ಸರ ಜ್ಯೇಷ್ಠ ಬಹುಳ ತ್ರಯೋದಶೀ ಭೌಮವಾಸರದಲ್ಲಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಪದವಾಕ್ಯಪ್ರಮಾಣಪಾರಾವಾರ ಪಾರಂಗತ ಸರ್ವತಂತ್ರಸ್ವತಂತ್ರ ಶ್ರೀಮದ್ವೈಷ್ಣವಸಿದ್ಧಾಂತಪ್ರತಿಷ್ಠಾಪನಾಚಾರ್ಯ ಶ್ರೀಮನ್ಮೂಲರಘುಪತಿವೇದವ್ಯಾಸದೇವರ ದಿವ್ಯಶ್ರೀಪಾದಪದ್ಮಾರಾಧಕ ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನಾಧೀಶ್ವರರಾದ ಶ್ರೀರಾಘವೇಂದ್ರ ಸ್ವಾಮಿಗಳವರ ಮಠದ ವೇದಾಂತಸಾಮ್ರಾಜ್ಯದಿಗ್ವಿಜಯ ವಿದ್ಯಾಸಿಂಹಾಸನಾಧೀಶ್ವರ-ರಾದ ಶ್ರೀಮತ್ಸುಯಮೀಂದ್ರತೀರ್ಥ ಶ್ರೀಪಾದಂಗಳವರ ಕರಕಮಲಸಂಜಾತರಾದ, ಶ್ರೀಮತ್ಸುಜಯೀಂದ್ರತೀರ್ಥ ಶ್ರೀಪಾದಂಗಳವರ ವರಕುಮಾರಕರಾದ

ಶ್ರೀಶ್ರೀ ೧೦೦೮ ಶ್ರೀಸುಶಮೀಂದ್ರತೀರ್ಥಮಹಾಸ್ವಾಮಿಭಿಃ ಅಸ್ಮತ್ ಪ್ರಿಯಶಿಷ್ಯ ಶ್ರೀ ಕೆ. ಸತ್ಯನಾರಾಯಣಾಚಾರ್ಯ ವಿಷಯೇ ನಾರಾಯಣಸ್ಮರಣ ಪೂರ್ವಕಂ ವಿರಚಿತಾ ಆಶಿಷಃ ಸಮುಲ್ಲಸಂತು ॥

ನಮ್ಮ ಪ್ರಿಯಶಿಷ್ಯರೂ, ಉತ್ತಮ ವಿದ್ವಾಂಸರೂ, ಪಾಠಪ್ರವಚನದಲ್ಲಿ ದೀಕ್ಷಿತರೂ ಆದ ಶ್ರೀ ಕೆ. ಸತ್ಯನಾರಾಯಣಾಚಾರ್ಯರು ಬೃಹನ್ನಾರದೀಯಪುರಾಣೋಕ್ತ ಹಾಗೂ ನಮ್ಮ ಮಠದ ಧರ್ಮಶಾಸ್ತ್ರ ಗ್ರಂಥ ಕರ್ತೃಗಳಾದ ಕೃಷ್ಣಾಚಾರ್ಯರ ಸ್ಮೃತಿಮುಕ್ತಾವಳಿ ಗ್ರಂಥಗಳಿಗೆ ಅನುಗುಣವಾಗಿ **"ಅಧಿಕಮಾಸದ ವಿಧಿ-ವಿಧಾನ"**ಗಳನ್ನು ಸಂಗ್ರಹಿಸಿ ಬರೆದಿದ್ದಾರೆ. ಶ್ರೀರಾಘವೇಂದ್ರ ಮಠದಿಂದ ಪಂಡಿತರಿಗೂ, ಜನಸಾಮಾನ್ಯರಿಗೂ ಉಪಯುಕ್ತವಾಗುವಂತೆ ಶ್ರೀಮದಾಚಾರ್ಯರ ಸಿದ್ಧಾಂತಕ್ಕೆ ಹಾಗೂ ಧರ್ಮಶಾಸ್ತ್ರಗಳಿಗೆ ಸಂಬಂಧಿಸಿದ ಅನೇಕ ಕೃತಿಗಳು ಪ್ರಕಟವಾಗಿವೆ. ಇದೀಗ ಈ

ಅಧಿಕಮಾಸ ಧರ್ಮಗಳನ್ನು ತಿಳಿಸುವ ಕೃತಿ ಪ್ರಕಟವಾಗಿರುವುದು ನಮಗೆ ಅತ್ಯಂತ ಆನಂದವಾಗಿದೆ. ಇದೇ ರೀತಿಯ ಗ್ರಂಥಗಳು ಶ್ರೀಮಠದಿಂದ ಸದಾ ದೊರೆಯುವುದಕ್ಕಾಗಿ ಶ್ರೀ ಕೆ. ಸತ್ಯನಾರಾಯಣಾಚಾರ್ಯರಿಗೆ ನಮ್ಮ ಉಪಾಸ್ಯಮೂರ್ತಿ ಶ್ರೀಮೂಲರಘುಪತಿ ವೇದವ್ಯಾಸದೇವರು ದೀರ್ಘ ಆಯುರಾರೋಗ್ಯಾದಿಗಳನ್ನು ಕೊಡಲಿ ಎಂದು ಪ್ರಾರ್ಥಿಸುತ್ತೇವೆ.

ಇತಿ ನಾರಾಯಣಸ್ಮರಣೆಗಳು

ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ



# ಲೇಖಕರ ನುಡಿ

'ಧರ್ಮೋ ರಕ್ಷತಿ ರಕ್ಷಿತಃ' ಎಂಬ ನುಡಿಯಂತೆ ಸರ್ವವಿಧದಿಂದಲೂ, ವೇದ, ಪುರಾಣೋಕ್ತ, ಧರ್ಮಗಳನ್ನು ಆಚರಿಸಿ ರಕ್ಷಿಸಬೇಕು. **'ಧರ್ಮಂ ತು ಸಾಕ್ಷಾದ್ ಭಗವತ್ಪ್ರಣೀತಂ'** ಎನ್ನುವುದು ಶ್ರೀಮದ್ಭಾಗವತ. ವೇದಮೂಲವಾಗಿರುವ ಬೃಹನ್ನಾರದೀಯ ಪುರಾಣದಲ್ಲಿ ಉಕ್ತವಾದ ಈ ಅಧಿಕಮಾಸದ ವಿಧಿ-ವಿಧಾನಗಳು ಸರಿಯಾಗಿ ತಿಳಿದು ಅನುಷ್ಠಾನ ಮಾಡಲು ಯೋಗ್ಯವಾಗಿದೆ. ಈ ಗ್ರಂಥದಲ್ಲಿ ಅನೇಕ ಪ್ರಮಾಣಗಳನ್ನು ಸಂಗ್ರಹಮಾಡಿ ಆಸ್ತಿಕ ಸಾಧಕರಿಗೆ ಸುಲಭಾನುಷ್ಠಾನಕ್ಕೆ ಅನುಕೂಲಕರವಾಗಿದೆ. ಕೆಲವರಿಗೆ ಅಧಿಕಮಾಸ ಅಂದರೆ ಕೇವಲ ಅಪೂಪದಾನಕ್ಕೆ ಮಾತ್ರ ಮಿತಿಯನ್ನು ಕಲ್ಪಿಸುತ್ತಾರೆ. ಆದರೆ ಈ ಗ್ರಂಥದಲ್ಲಿ ಆಮೂಲಾಗ್ರ ಮಂತ್ರಗಳು, ಪೂಜಾವಿಧಾನ, ದಾನಕ್ರಮ, ಮಾಸನಿಯಮಗಳು, ಶ್ರಾದ್ಧ ವಿಚಾರಗಳು ಇತ್ಯಾದಿಯಾಗಿ ಅಧಿಕಮಾಸದ ಕರ್ತವ್ಯವನ್ನು ವಿವರಿಸಲಾಗಿದೆ. ಚಾತುರ್ವರ್ಣದವರು ಈ ವಿಷ್ಣುವ್ರತವನ್ನು ಗ್ರಹಣ ಮಾಡುವುದಕ್ಕೆ ಅಧಿಕಾರಿಗಳಾಗಿರುತ್ತಾರೆ. ಕ್ಷೀಣದೆಶೆಯಲ್ಲಿರುವ ಕರ್ಮಾನುಷ್ಠಾನಗಳಲ್ಲಿ ಧರ್ಮಾಚರಣೆಯು ವೇದಶಾಸ್ತ್ರಗಳಿಗೆ ಅನುಗುಣವಾಗಿರಬೇಕು. ಕರ್ಮಮಾರ್ಗದಿಂದ ಚಿತ್ತಶುದ್ಧಿಯ ನಂತರ ಮೋಕ್ಷಜ್ಞಾನಕ್ಕೆ ಅಧಿಕಾರಿಯಾಗುತ್ತಾರೆ. **'ಕರ್ಮಣಾ ಜ್ಞಾನಮಾತನೋತಿ' 'ಜ್ಞಾನೇನ ಅಮೃತೀಭವತಿ'** ಇದನ್ನೇ ಶ್ರೀಮದಾಚಾರ್ಯರು **'ಸ್ವವಿಹಿತವೃತ್ತ್ಯಾ ಭಕ್ತ್ಯಾ ಭಗವದಾರಾಧನಮೇವ ಪರಮೋ ಧರ್ಮಃ ತದ್ವಿರುದ್ಧಃ ಸರ್ವೋಽಪಿ ಅಧರ್ಮಃ'** ಈ ಜ್ಞಾನ ಬರುವುದಕ್ಕೆ ಶ್ರೀವೇದವ್ಯಾಸರು ಪುರಾಣಗಳನ್ನು ರಚಿಸಿ ಧರ್ಮಾಚರಣೆಯ ಫಲವನ್ನು ನಿರೂಪಿಸಿರುತ್ತಾರೆ. ಈ ಸಣ್ಣ ಕೃತಿಯಿಂದ ಅಸ್ಮದ್ ಗುರು ಶ್ರೀರಾಘವೇಂದ್ರತೀರ್ಥ ಗುರ್ವಂತರ್ಗತ, ಭಾರತಿರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹಾಭಿನ್ನ ಮಾಸನಿಯಾಮಕ ಶ್ರೀಪುರುಷೋತ್ತಮನು ಪ್ರೀತನಾಗಲಿ.

ಈ ಕೃತಿಗೆ ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಾಧೀಶ್ವರ ಶ್ರೀರಾಘವೇಂದ್ರಸ್ವಾಮಿಗಳವರ ಮಠದ ವಿದ್ಯಾಸಿಂಹಾಸನಾಧೀಶ್ವರರಾದ ಪರಮಪೂಜ್ಯ

ಶ್ರೀಶ್ರೀ ೧೦೦೮ ಶ್ರೀಸುಶಮೀಂದ್ರತೀರ್ಥ ಶ್ರೀಪಾದರು ಅನುಗ್ರಹಿಸಿ ಆಶೀರ್ವಾದ ಮಾಡಿರುತ್ತಾರೆ. ಜ್ಞಾನಕಾರ್ಯದಲ್ಲಿ ದೀಕ್ಷಿತರಾದ ಶ್ರೀಶ್ರೀಗಳವರ ಆಪ್ತಕಾರ್ಯದರ್ಶಿಗಳಾದ ಶ್ರೀ ರಾಜಾ. ಎಸ್. ರಾಜಗೋಪಾಲಾಚಾರ್ಯರ ಪ್ರೋತ್ಸಾಹ ದಕ್ಷತೆಯಿಂದ ಇಂಥಾ ಅನೇಕ ಕೃತಿಗಳು ಹೊರಬರಲು ಸಾಧ್ಯವಾಯಿತು.

ಇವರೆಲ್ಲರಿಗೂ ನನ್ನ ಅನಂತಾನಂತ ಪ್ರಣಾಮಗಳನ್ನು ಅರ್ಪಿಸುತ್ತಿದ್ದೇನೆ.


ಸಜ್ಜನ ವಿಧೇಯ

**ಕೆ. ಸತ್ಯನಾರಾಯಣಾಚಾರ್ಯ**

ಮಾಧ್ವ ವೇದಾಂತ ಪಾಠಶಾಲಾ

ರಾಜಾಜಿನಗರ, ಬೆಂಗಳೂರು

# ವಿಷಯಸೂಚಿ


| | | ಪುಟ ಸಂಖ್ಯೆ |
|---|---|---|
| ೧. | ಅಧಿಕಮಾಸ | ೧ |
| ೨. | ಪುರುಷೋತ್ತಮ ಮಾಸದ ಶ್ರೇಷ್ಠತೆ | ೫ |
| ೩. | ಪುರುಷೋತ್ತಮ ಪೂಜಾವಿಧಿ | ೬ |
| ೪. | ಅಪೂಪ ದಾನ ವಿಧಾನ | ೧೧ |
| ೫. | ದಾನ ಕೊಡುವ ಪೂರ್ವದಲ್ಲಿ ಹೇಳಬೇಕಾದ ನಾಮಗಳು | ೧೨ |
| ೬. | ಅಧಿಕಮಾಸದ ಕರ್ತವ್ಯಗಳು | ೧೬ |
| ೭. | ಅಧಿಕಮಾಸದಲ್ಲಿ ಇತರೆ ದಾನಗಳು | ೧೮ |
| ೮. | ಅಧಿಕಮಾಸದಲ್ಲಿ ನಿಷಿದ್ಧ ಕರ್ಮಗಳು | ೧೯ |
| ೯. | ತೀರ್ಥಯಾತ್ರಾ | ೨೧ |
| ೧೦. | ಪ್ರತಿಸಾಂವತ್ಸರಿಕ ಶ್ರಾದ್ಧ ವಿಚಾರ | ೨೨ |
| ೧೧. | ಕ್ಷಯಮಾಸ | ೨೩ |
| ೧೨. | ಬೃಹನ್ನಾರದೀಯ ಪುರಾಣೋಕ್ತ ಕಥಾಭಾಗ | ೨೫ |

॥ ಶ್ರೀಮನ್ಮೂಲರಾಮೋವಿಜಯತೇ ॥

# ಪುರುಷೋತ್ತಮ (ಅಧಿಕ) ಮಾಸ ವಿಧಿ-ವಿಧಾನಗಳು

**ವಂದೇ ವಂದಾರು ಮಂದಾರಂ ವೃಂದಾವನ ವಿನೋದಿನಂ ।**
**ವೃಂದಾವನ ಕಲಾನಾಥಂ ಪುರುಷೋತ್ತಮಮದ್ಭುತಮ್ ॥**

ಬೃಹನ್ನಾರದೀಯ ಪುರಾಣದಲ್ಲಿ ಬರುವ ಅಧಿಕಮಾಸ / ಪುರುಷೋತ್ತಮ ಮಾಸದ ವ್ರತದ ಪೂಜಾ-ದಾನಾದಿಗಳು ಹಾಗೂ ಮಾಹಾತ್ಮೆಗಳನ್ನು ಈ ಕೃತಿಯಲ್ಲಿ ಯಥಾಮತಿ ನಿರೂಪಿಸಲಾಗಿದೆ. ಅತ್ಯವಶ್ಯವಾಗಿ ಅನುಷ್ಠಿಸಬೇಕಾದ ಕರ್ತವ್ಯಗಳನ್ನು ವಿಸ್ತಾರವಾಗಿ ಸಾಧಕರ ಅನುಕೂಲಕ್ಕಾಗಿ ವಿವರಿಸಿದೆ. ಆಲಸ್ಯವಿಲ್ಲದೆ ಭಕ್ತಿ-ಶ್ರದ್ಧಾದಿಗಳಿಂದ ಪುರುಷೋತ್ತಮನ ಪ್ರೀತಿಗಾಗಿ ಆಚರಿಸಲೇಬೇಕು. ಮೊದಲು ಮಲಮಾಸವೆಂದು ಸರ್ವಕರ್ಮಗಳು ವರ್ಜ್ಯವಾಗಿದ್ದ ಸಮಯದಲ್ಲಿ ಶ್ರೀಹರಿ ಪುರುಷೋತ್ತಮನ ಅನುಗ್ರಹದಿಂದ ಪುರುಷೋತ್ತಮ ಮಾಸವು ಸಕಲ ಪುಣ್ಯಕಾರ್ಯಗಳಿಗೆ ಗ್ರಾಹ್ಯವಾಯಿತು. ಈ ಮಾಸದಲ್ಲಿ ಮಾಡಲ್ಪಡುವ ಸತ್ಕರ್ಮಗಳಿಗೆ ಅಧಿಕವಾದ ಫಲವಿರುವುದರಿಂದ ಇದು ಅಧಿಕಮಾಸ ಎಂದು ಕರೆಯಲ್ಪಟ್ಟಿತು.

## ಮಲಮಾಸ

ಮಲಮಾಸ ಎಂದರೆ **(I) ಅಧಿಕಮಾಸ, (II) ಕ್ಷಯಮಾಸ.** ಸಂಕ್ರಾಂತಿಯಿಲ್ಲದ ಮಾಸವು **ಅಧಿಕಮಾಸ.** ಎರಡು ಸಂಕ್ರಾಂತಿಗಳಿಂದ ಕೂಡಿದ ಮಾಸವೆ **ಕ್ಷಯಮಾಸ.** ಅಧಿಕಮಾಸದಂತೆ ಅಲ್ಪಕಾಲದಲ್ಲಿ ಕ್ಷಯಮಾಸ ಬರುವುದಿಲ್ಲ. ನೂರನಲವತ್ತೊಂದು ವರ್ಷಗಳಿಗೊಮ್ಮೆ ಅಥವಾ ಹತ್ತೊಂಭತ್ತು ವರ್ಷಗಳಿಗೊಮ್ಮೆ ಕ್ಷಯಮಾಸವು ಬರುವುದು.

### ಅಧಿಕಮಾಸ

ಸೂರ್ಯನ ಸಂಕ್ರಮಣವಿಲ್ಲದ ಮಾಸವನ್ನು 'ಅಧಿಕಮಾಸ' ಎನ್ನುವರು. 'ಅಸಂಕ್ರಾಂತಮಾಸೋಽಧಿಮಾಸಃ' ಎಂಬುದು ನಿರುಕ್ತಿ. ಯಾವ ತಿಂಗಳಲ್ಲಿ ರವಿಯ



ಸಂಕ್ರಾಂತಿಯಿಲ್ಲದೆ ಎರಡು ಅಮಾವಾಸ್ಯೆಗಳು ಇರುವುವೋ ಅದನ್ನು ಅಧಿಕಮಾಸ ಎನ್ನುವರು.

**ಅಮಾವಾಸ್ಯಾದ್ವಯಂ ಯತ್ರ ರವಿಸಂಕ್ರಾಂತಿವರ್ಜಿತಂ ।**
**ಮಲಮಾಸಃ ಸ ವಿಜ್ಞೇಯಃ ಹರಿಸ್ವರ್ಪಿತಿ ಕರ್ಕಟೇ ॥**

**ಮಲಮಾಸ** : ಅಧಿಕಮಾಸವನ್ನೇ ಮಲಮಾಸ ಎಂದು ಕರೆಯುವರು.

**ಮಲಂ ಕಾಲಸ್ಯ ವದಂತಿ ಮಾಸಂ ಕಾಲವಿದೋಽಧಿಕಮ್ ।**

ಹೇಗೆ ದೇಹಕ್ಕೆ ಸೇರದೇ ಅಧಿಕವಾದ ಮಲವನ್ನು "ಮಲ" ಎಂದಂತೆ ವರ್ಷಕ್ಕೆ ಸೇರದೇ ಅಧಿಕವಾದ ದಿನಗಳನ್ನು 'ಮಲಮಾಸ' ಎನ್ನುವರು.

**ಚಾಂದ್ರಮಾಸೋ ಹ್ಯಸಂಕ್ರಾಂತಃ ಮಲಮಾಸಃ ಪ್ರಕೀರ್ತಿತಃ ।**

- (ಬ್ರಹ್ಮಸಿದ್ಧಾಂತ)

ಕಾಲದ ಆಧಿಕ್ಯವನ್ನೇ 'ಮಲ' ಎನ್ನಲಾಗಿದೆ.

**ಕಾಲಾಧಿಕ್ಯ** : ಸೌರವರ್ಷವು ೩೬೫ ದಿವಸಗಳಿಂದ ಕೂಡಿರುತ್ತದೆ. ಚಾಂದ್ರವರ್ಷವು ೩೫೪ ದಿವಸಗಳು (೩೬೫-೩೫೪=೧೧) ಸೌರವರ್ಷಕ್ಕೂ ಚಾಂದ್ರವರ್ಷಕ್ಕೂ ಹನ್ನೊಂದು ದಿವಸಗಳು ವ್ಯತ್ಯಾಸವಾದಂತಾಯಿತು.

**ಸೌರಸಂವತ್ಸರಸ್ಯಾಂತೇ ಮಾನೇನ ಶಶಿಜೇನ ತು ।**
**ಏಕಾದಶಾತಿರಿಚ್ಯಂತೇ ದಿನಾನಿ ಭೃಗುನಂದನ ॥**

ಹೀಗೆ ಒಂದು ವರ್ಷಕ್ಕೆ ಹನ್ನೊಂದು ದಿನಗಳು ವ್ಯತ್ಯಾಸವಾದರೆ ಎರಡು ವರ್ಷ ಹಾಗೂ ಎಂಟು ತಿಂಗಳುಗಳಿಗೆ ಇಪ್ಪತ್ತೊಂಭತ್ತುವರೆ ದಿವಸಗಳು ವ್ಯತ್ಯಾಸವಾದಂತಾಯಿತು. (೧೧ + ೧೧ + ೭ ೧/೨ = ೨೯ ೧/೨)

ಒಂದು ವರ್ಷಕ್ಕೆ - ೧೧ ದಿವಸಗಳು

ಎರಡು ವರ್ಷಕ್ಕೆ - ೧೧ ದಿವಸಗಳು

ಎಂಟು ತಿಂಗಳಿಗೆ - ೭ ೧/೨ ದಿವಸಗಳು

ಒಟ್ಟು ೨೯ ೧/೨ ದಿವಸಗಳು ಚಾಂದ್ರಮಾಸದ ರೀತ್ಯಾ ಕಡಿಮೆಯಾದಂತಾಯಿತು.

**ಸಮಾದ್ವಯೇ ಸಾಷ್ಟಮಾಸೇ ತಸ್ಮಾನ್ ಮಾಸೋಽತಿರಿಚ್ಯತೇ ।**

ಈ ವ್ಯತ್ಯಾಸವನ್ನು ಸರಿಪಡಿಸಲೆಂದು ಚಾಂದ್ರಮಾನರೀತ್ಯಾ ೨೯೧/೨ ದಿವಸಗಳನ್ನು ಅಧಿಕಮಾಸವೆಂದು ಪರಿಗಣಿಸಲಾಗುವುದು.

**ಮುವ್ವತ್ತಮೂರು ಸಂಖ್ಯೆ** : ಹಿಂದೆ ತಿಳಿಸಿದಂತೆ ಸೌರಮಾಸ ಹಾಗೂ ಚಾಂದ್ರಮಾಸಗಳಿಗೆ ೨ ವರ್ಷ ಎಂಟು ತಿಂಗಳುಗಳಿಗೆ ಎಂದರೆ ೩೨ ತಿಂಗಳುಗಳಿಗೆ ೨೯೧/೨ ದಿವಸಗಳು ವ್ಯತ್ಯಾಸವಾಗುತ್ತದೆ. ಮುವ್ವತ್ತು ದಿವಸಗಳಿಗೆ ಇನ್ನೂ ಅರ್ಧ ದಿವಸವು ಉಳಿದಿರುವುದು.

ಹೀಗೆ ಉಳಿದ ಅರ್ಧದಿವಸವನ್ನು ಪೂರೈಸಲು ಹಿಂದೆ ಹೇಳಿದ ೨ ವರ್ಷ ಎಂಟು ತಿಂಗಳುಗಳ (೩೨) ನಂತರ ಬರುವ ಮುವ್ವತ್ತುಮೂರನೇ ತಿಂಗಳ ಹದಿನಾರು ದಿವಸಗಳು ಹಾಗೂ ನಾಲ್ಕು ಘಳಿಗೆಗಳನ್ನು ಸೇರಿಸಿದರೆ ಮುವ್ವತ್ತು ದಿನಗಳ ಒಂದು ಮಾಸವಾಗಿ ಅಧಿಕಮಾಸವೇರ್ಪಡುತ್ತದೆ.

**ದ್ವಾತ್ರಿಂಶದ್ಭಿಃ ಗತೈಃ ಮಾಸೈಃ ದಿನೈಃ ಷೋಡಶಭಿಸ್ತಥಾ ।**
**ಘಟಿಕಾನಾಂ ಚತುಷ್ಕೇಣ ಪತತ್ಯಧಿಕಮಾಸಕಃ ॥**

**ಮುಲಿಮ್ಲುಚ** : ಯಾವ ಮಾಸದಲ್ಲಿ ಸೂರ್ಯನಿರುವುದಿಲ್ಲವೋ ಆ ಮಾಸವನ್ನು 'ಮುಲಿಮ್ಲುಚ' ಅಥವಾ ನಪುಂಸಕವೆಂದು ಕರೆಯುವರು.

**ನಿಸ್ಸೂರ್ಯೋ ಅಧಿಕಮಾಸೋ ಮಲಿಂಮ್ಲುಚಾಖ್ಯಸ್ತತಃ ಪಾಪಃ ।**

**ದ್ವಾದಶಾದಿತ್ಯರು** : ಮಾಘದಿಂದ ಪ್ರಾರಂಭಿಸಿ ಅರುಣ, ಸೂರ್ಯ, ಭಾನು, ತಪನ, ಇಂದ್ರ, ರವಿ, ಗಭಸ್ತಿ, ಅರ್ಯಮ, ಹಿರಣ್ಯರೇತಸ, ದಿವಾಕರ, ಮಿತ್ರ, ವಿಷ್ಣು ಈ ದ್ವಾದಶಾದಿತ್ಯರು ಆಯಾಯ ಮಾಸಗಳಲ್ಲಿ ಉದಯಿಸುವರು. ಮಲಮಾಸದಲ್ಲಾದರೂ ಯಾವ ಸೂರ್ಯನೂ ಉದಯಿಸಲು ಇರುವುದಿಲ್ಲವಾದ್ದರಿಂದ ಸೂರ್ಯಮಂಡಲವೆ ತಾಪ, ಪ್ರಕಾರಾದಿಗಳನ್ನು ಕೊಡುವುದು.

**'ಅರುಣಸ್ಸೂರ್ಯೋ ಭಾನುಸ್ತಪನಶ್ಚೇಂದ್ರೋ ರವಿಗರ್ಭಸ್ತಿಶ್ಚ ।**
**ಅರ್ಯಮಹಿರಣ್ಯರೇತೋ ದಿವಾಕರಾ ಮಿತ್ರವಿಷ್ಣೂ ಚ ॥**

**ಏತೇ ದ್ವಾದಶ ಸೂರ್ಯಾಃ ಮಾಘಾದ್ಯೇಷೂದಯಂತಿ ।**
**ಮಾಸೇಷು ದ್ವಾದಶಾದಿತ್ಯಾಸ್ತಪನ್ತೇ ಹಿ ಯಥಾಕ್ರಮಂ ॥**



**ನಪುಂಸಕೇಽಧಿಕೇ ಮಾಸಿ ಮಂಡಲಂ ತಪತೇ ರವೇಃ ॥'** ಎಂದು ಪ್ರತಿಪಾದಿಸಲಾಗಿದೆ.

ಅಧಿಕಮಾಸವು ಮಲಿನವಾದ್ದರಿಂದ ಪಾಪವೆಂದು ಕರೆಯಲಾಗಿದೆ. ಅಧಿಕಮಾಸವು ವರ್ಷದಲ್ಲೇ ಸೇರಿ ಪಾಪಿಷ್ಠವೆನಿಸಿದೆ. ಈ ಮಾಸದಲ್ಲಿ ಮಾಡಿದ ಕಾಮ್ಯಯಜ್ಞಗಳ ಫಲವನ್ನು ಪಾಪವು ನಾಶಮಾಡುತ್ತದೆ.

**ವತ್ಸರಾಂತರ್ಗತಃ ಪಾಪೋ ಯಜ್ಞಾನಾಂ ಫಲನಾಶಕೃತ್ ।**
**ನೈರ್ಋತೈಃ ಯಾತುಧಾನಾದ್ಯೈಃ ಸಮಾಕ್ರಾಂತೋ ವಿನಾಶಕೈಃ ॥**

ನಿರ್ಋತಿಯ ರಾಕ್ಷಸರಾದ ನೈರ್ಋತರಿಂದ ಈ ಮಾಸವು ಆಕ್ರಮಿಸಿರುವುದರಿಂದ ನಿಷ್ಕಾಮನೆಯ ಕರ್ಮವನ್ನು ಹೊರತುಪಡಿಸಿ ಉಳಿದ ಕಾಮ್ಯಕರ್ಮಗಳ ಫಲವನ್ನು ಈ ನೈರ್ಋತರು ನಾಶಮಾಡುವರು.

**ಅರವತ್ತು ದಿವಸಗಳ ಮಾಸ** : ಯಾವ ಮಾಸಗಳಲ್ಲಿ ಅಧಿಕಮಾಸವು ತೋರುವುದೋ ಅದು ಉತ್ತರದ ತಿಂಗಳಿನಲ್ಲಿ ಸೇರುತ್ತದೆ ಎಂದು ತಿಳಿಯಬೇಕು. ಜ್ಯೇಷ್ಠವು ಅಧಿಕವಾದರೆ ಅಧಿಕಜ್ಯೇಷ್ಠಮಾಸವು ನಿಜಜ್ಯೇಷ್ಠಕ್ಕೆ ಸೇರಿ ಒಟ್ಟು ಅರವತ್ತು ದಿವಸಗಳಿಗೆ ಒಂದು ಮಾಸವಾಗುತ್ತದೆ. ಇವುಗಳಲ್ಲಿ ಪೂರ್ವಾರ್ಧವು (೩೦ ದಿನಗಳು) ಪ್ರಶಸ್ತವಾಗಿರುವುದಿಲ್ಲ- ವಾದ್ದರಿಂದ ಕಾಮ್ಯಕರ್ಮಗಳನ್ನು ಮಾಡದೆ ಮುಂದಿನ ಮುವ್ವತ್ತು ದಿವಸಗಳು ಅದರಲ್ಲಿ ಪ್ರಶಸ್ತವಾದ್ದರಿಂದ ಕರ್ಮಗಳನ್ನು ಆಚರಿಸಬೇಕು.

**ಷಷ್ಟ್ಯಾ ತು ದಿವಸೈಃ ಮಾಸಃ ಕಥಿತೋ ಬಾದರಾಯಣೈಃ ।**
**ಪೂರ್ವಾರ್ಧಂ ತು ಪರಿತ್ಯಜ್ಯ ಉತ್ತರಾರ್ಧಂ ಪ್ರಶಸ್ಯತೇ ॥**

**ಸಂಭವಾಭಿಪ್ರಾಯ** : ಅಧಿಕಮಾಸವು ಸಾಮಾನ್ಯವಾಗಿ ಮುವ್ವತ್ತು ಮೂರು ತಿಂಗಳಿನಲ್ಲಿ ಬರುವ ಸಂಭವವಿದೆ ಎಂದು ಅರ್ಥವೆ ವಿನಹ ಮುವ್ವತ್ತುಮೂರನೇ ತಿಂಗಳಿಗೇ ಬರುವುದೆಂಬ ನಿಯಮವಿಲ್ಲ. ಕೆಲವು ಬಾರಿ ಗ್ರಹಗಳ ಅತಿಚಾರದಿಂದ, ಕಾಲದ ಅತಿರೇಕದಿಂದಲೂ ೨೯ ತಿಂಗಳು, ೩೦ ತಿಂಗಳು, ೩೧ ತಿಂಗಳು, ಕೆಲವು ಬಾರಿ ೩೫ ತಿಂಗಳುಗಳಲ್ಲಿಯೂ, ಅಧಿಕಮಾಸ ಬರುವ ಸಂಭವವಿದೆ. ಅತಿಚಾರಾದಿಗಳು ಇಲ್ಲದಿರುವಾಗ ೩೩ನೇ ಮಾಸದಲ್ಲಿ ಅಧಿಕ ಮಾಸವು ಬರುವುದೆಂದರ್ಥ. ಆದ್ದರಿಂದಲೇ ಮಹಾಭಾರತದಲ್ಲಿ ೫ ವರ್ಷಕ್ಕೆರಡು ಅಧಿಕಮಾಸವು ಬರುತ್ತದೆ ಎಂದು ಹೇಳಲಾಗಿದೆ.

**ಪಂಚಮೇ ಪಂಚಮೇ ವರ್ಷೇ ದ್ವೌಮಾಸಾವಧಿಮಾಸಕೌ ।**
**ತೇಷಾಂ ಕಾಲಾತಿರೇಕೇಣ ಗ್ರಹಾಣಾಮತಿಚಾರತಃ ॥**

ಹಾಗೆಯೇ ಕಾಠಕಗೃಹ್ಯದಲ್ಲಿ ಮುವ್ವತ್ತನೆಯ ತಿಂಗಳಿನಲ್ಲಿ ಅಧಿಕಮಾಸವು ಬರುತ್ತದೆ ಎಂದು ಹೇಳಲಾಗಿದೆ. ಇವೆಲ್ಲವೂ ಬರುವ ಸಂಭವವಿದೆ ಎಂದಭಿಪ್ರಾಯವುಳ್ಳದ್ದು.

**ಮಲಮಾಸಃ ಸ ವಿಜ್ಞೇಯಃ ಮಾಸೇ ತ್ರಿಂಶತ್ತಮೇ ಭವೇತ್ ॥**

## ಪುರುಷೋತ್ತಮ ಮಾಸದ ಶ್ರೇಷ್ಠತೆ

ಪುರುಷೋತ್ತಮನು ಅಧಿಕಮಾಸಕ್ಕೆ ನಿಯಾಮಕನಾಗಿರುವನು. ಆದ್ದರಿಂದಲೇ ಅಧಿಕಮಾಸಕ್ಕೆ 'ಪುರುಷೋತ್ತಮ ಮಾಸ' ಎಂದು ಕರೆಯುವರು. ಪುರುಷೋತ್ತಮನಲ್ಲಿ ಗುಣಗಳು ಇರುವಂತೆ, ಈ ಪುರುಷೋತ್ತಮ ಮಾಸದಲ್ಲಿ ಗುಣಗಳು ಇರುವುವು. ಭಗವಂತನ ಸಾದೃಶ್ಯವನ್ನು ಹೊಂದಿ ಮಾಸಗಳಿಗೆ 'ಅಧಿಕ'ನಾಗಿ ರಾರಾಜಿಸುತ್ತಿದೆ.

ಒಂದು ತಿಂಗಳು ಪೂರ್ತಿಯಾಗಿ ಅಧಿಕಮಾಸದಲ್ಲಿ ಆ ಮಾಸೋಕ್ತ ಧರ್ಮವನ್ನು ಆಚರಿಸುವವರಿಗೆ ಇಹ ಹಾಗೂ ಪರಗಳಲ್ಲಿ ಉತ್ತಮ ಲೋಕ ಪ್ರಾಪ್ತಿಯಾಗುವುವು. ಭಗವಂತನು ಇತರ ಮಾಸಗಳಲ್ಲಿ ಕರ್ಮವಾಚರಿಸುವಾಗ ಮಾಡಿದ ಅಪರಾಧಗಳನ್ನು ಕೆಲವು ಬಾರಿ ಕ್ಷಮಿಸದೆ ಇದ್ದದ್ದು ಇದೆ. ಆದರೆ ಪುರುಷೋತ್ತಮ ಮಾಸದಲ್ಲಿ ಕರ್ಮಗಳನ್ನು ಮಾಡುವಾಗ ಆಗುವ ಅಪರಾಧಗಳನ್ನು ಖಂಡಿತಾ ಕ್ಷಮಿಸುವನು. ಇತರ ಮಾಸಗಳಲ್ಲಿ ಮಾಡಿದ ಕರ್ಮಗಳಿಗೆ ಭಗವಂತನು ಫಲವನ್ನು ವಿಲಂಬವಾಗಿ ಕೊಡುವನು, ಆದರೆ ಪುರುಷೋತ್ತಮ ಮಾಸದಲ್ಲಿ ಫಲವನ್ನು ನೀಡಲು ವಿಲಂಬವನ್ನು ಮಾಡಲಾರನು.

**ಮದೀಯಮಾಸಭಕ್ತಾನಾಂ ನ ವಿಲಂಬಃ ಕದಾಚನ ।**

ಪುರುಷೋತ್ತಮ ಮಾಸದಲ್ಲಿ ಪುಣ್ಯವು ಅಧಿಕವಾಗಿ ಲಭಿಸುವುದರಿಂದ 'ಅಧಿಕಮಾಸ'ವೆಂತಲೂ, ಪಾಪಗಳನ್ನು ಭಗವಂತನು ಪರಿಹರಿಸುವುದರಿಂದ 'ಮಲಮಾಸ'ವೆಂದು ಹೆಸರು. ಅಧಿಕಮಾಸವನ್ನು ಆಚರಿಸುವ ಸ್ತ್ರೀಯರಿಗೆ ಸೌಭಾಗ್ಯ ಮಾತ್ರವಲ್ಲದೆ ಭಗವನ್ನಿಷ್ಠರಾದ ಪುತ್ರರನ್ನೂ ಭಗವಂತನು ನೀಡುವನು. ಅಧಿಕಮಾಸವು ಭಗವಂತನಿಗೆ ಅತ್ಯಧಿಕಪ್ರಿಯವೆನಿಸಿದ್ದು ಆ ಮಾಸದಲ್ಲಿ ಧರ್ಮಗಳನ್ನು ಮಾಡದೆ ಇರುವವರಿಗೆ ಎಂದೂ ಭಗವಂತನೂ ಅನುಕೂಲನಾಗುವುದಿಲ್ಲ. ಅಧಿಕಮಾಸದಲ್ಲಿ ಮಾಡುವ ಸ್ನಾನದಿಂದ ಭ್ರೂಣಹತ್ಯೆಯೂ ಪರಿಹೃತವಾಗುತ್ತದೆ. ಕಾರ್ತಿಕಾದಿ ಹನ್ನೆರಡು ಮಾಸಗಳಲ್ಲಿ ಯಾವ ಮಾಸವೂ ಪುರುಷೋತ್ತಮ ಮಾಸಕ್ಕೆ ಸಮವಾಗಲಾರದು.

**ಏತತ್ ತುಲ್ಯೋ ನ ಕೋಪ್ಯನ್ಯಃ ಕಾರ್ತಿಕಾದಿಷು ವಿದ್ಯತೇ ॥**



ಈ ಮಾಸದಲ್ಲಿ ಮಾಡಿದ ಒಂದು ದಿನದ ಸ್ನಾನವೂ ದ್ವಾದಶಾಬ್ದ ಸಹಸ್ರಫಲಗಳನ್ನು ಕೊಡುತ್ತದೆ. ದುರ್ವಾಸರು ಈ ವ್ರತವನ್ನು ಆಚರಿಸಿದ್ದರಿಂದಲೇ ಭಗವಂತನ ಚಕ್ರವು ಅಟ್ಟಿಸಿಕೊಂಡು ಬಂದಿತೇ ವಿನಹ ಅವರನ್ನು ಸುಡಲಿಲ್ಲ.

**ಪುರುಷೋತ್ತಮವ್ರತಾದೇವ ತಚ್ಚಕ್ರಂ ಸಂನ್ಯವರ್ತತ ।**

ಚತುರ್ಮುಖಬ್ರಹ್ಮದೇವರು ದೇವತೆಗಳ ಸಮ್ಮುಖದಲ್ಲಿ ವೇದೋಕ್ತಸಾಧನೆಗಳನ್ನು ಸಂಗ್ರಹಮಾಡಿ ಅವುಗಳನ್ನು ತಕ್ಕಡಿಯಲ್ಲಿ ಒಂದು ಬದಿಯಲ್ಲಿಟ್ಟು ಇನ್ನೊಂದು ಬದಿಯಲ್ಲಿ ಪುರುಷೋತ್ತಮ ಮಾಸದಲ್ಲಿ ಸಾಧನೆಗಳನ್ನು ಇಟ್ಟು ತೂಗಿದರು. ಆಗ ಪುರುಷೋತ್ತಮ ಮಾಸದ ಸಾಧನೆಗಳೇ ಭಾರವಾಯಿತು.

**ತೋಲಯಾಮಾಸ ದೇವಾನಾಂ ಸನ್ನಿಧೌ ಚತುರಾನನಃ ।**
**ಲಘೂನ್ಯನ್ಯಾನಿ ಜಾತಾನಿ ಗುರುಶ್ಚ ಪುರುಷೋತ್ತಮಃ ॥**

ಅಧಿಕಮಾಸಕ್ಕೆ ಮಲಮಾಸವೆಂದೂ ಹೆಸರಿದೆ. ಸೂರ್ಯನ ಸಂಕ್ರಾಂತಿ ರಹಿತವಾದ ಈ ಮಾಸಗಳಲ್ಲಿ ಮಾಡಬಹುದಾದ ಶುಭಕಾರ್ಯಗಳಿಗೆ ಪ್ರಾಧಾನ್ಯತೆ ಇಲ್ಲವಾದ್ದರಿಂದಲೇ ಮಲಮಾಸವೆನಿಸಿದೆ. ಯಾವ ಪುಣ್ಯಕಾರ್ಯಗಳನ್ನು ಮಾಡುವುದಿಲ್ಲವೆಂದಾದರೆ ಧರ್ಮಸಾಧನೆ ಹೇಗೆ? ಎಂಬ ಪ್ರಶ್ನೆಗೆ ಉತ್ತರವಾಗಿ ಪುರುಷೋತ್ತಮನು ಹೀಗೆ ತಿಳಿಸಿದ್ದಾನೆ. ವರ್ಷದಲ್ಲಿ ಮಾಡಬಹುದಾದ ಸಮಸ್ತವ್ರತಾದಿಗಳನ್ನು ಮಾಡಲು ಸಾಧ್ಯವಿಲ್ಲದಿದ್ದರೆ ಚಾತುರ್ಮಾಸ್ಯದಲ್ಲಿ ಉಕ್ತವಾದ ವ್ರತಗಳನ್ನು ಆಚರಿಸಿದರೆ ವಾರ್ಷಿಕಫಲವು ಲಭಿಸುವುದು.

## ಅಥ ಪುರುಷೋತ್ತಮ ಪೂಜಾವಿಧಿಃ

ಈ ಅಧಿಕಮಾಸದಲ್ಲಿ ನಿತ್ಯದಲ್ಲೂ ಪುರುಷೋತ್ತಮನ ಪೂಜೆ ಅವಶ್ಯ ಕರ್ತವ್ಯ. ಸಾಲಿಗ್ರಾಮ - ಪ್ರತಿಮಾಗಳ ಸಮೇತ, ರಾಧಾಕೃಷ್ಣನ ಪ್ರತಿಮೆಯನ್ನೂ ಅಗ್ನ್ಯುತ್ತಾರಣ ಪ್ರಾಣಪ್ರತಿಷ್ಠೆ ಮಾಡಿ ತಂತ್ರಸಾರೋಕ್ತ ದೇವಪೂಜಾ ಮಾಡಬೇಕು. ಇದನ್ನೇ ಬೃಹನ್ನಾರದೀಯದಲ್ಲಿ -

**ಪುರುಷೋತ್ತಮ ಮಾಸಸ್ಯ ದೈವತಂ ಪುರುಷೋತ್ತಮಃ ।**
**ತಸ್ಮಾತ್ಸಂಪೂಜಯೇದ್ಭಕ್ತ್ಯಾಶ್ರದ್ಧಯಾ ಪುರುಷೋತ್ತಮಮ್ ॥**

**ರಾಧಾಯಾ ಸಹಿತಃ ಕಾರ್ಯಃ ಸೌವರ್ಣಃ ಪುರುಷೋತ್ತಮಃ ।**

ಈ ಪೂಜಾವಿಧಾನವನ್ನು ಇಲ್ಲಿ ವಿಶದವಾಗಿ ಸಂಗ್ರಹಿಸಲಾಗಿದೆ - ಕಲಶಪೂಜಾ, ಶಂಖಪೂಜಾ, ಪೀಠಪೂಜಾ ನಂತರದಲ್ಲಿ ಅಲಂಕೃತ ಮಂಟಪದಲ್ಲಿ ಷೋಡಶೋಪಚಾರ ಪೂಜಾ ಮಾಡಬೇಕು.

## ॥ ಪುರುಷೋತ್ತಮಪೂಜಾವಿಧಿಃ ॥

॥ ಶ್ರೀಹನುಮ-ಭೀಮ-ಮಧ್ವಾಂತರ್ಗತ ರಾಮ-ಕೃಷ್ಣ-ವೇದವ್ಯಾಸಾತ್ಮಕ ಲಕ್ಷ್ಮೀಹಯಗ್ರೀವಾತ್ಮಕ ಲಕ್ಷ್ಮೀನರಸಿಂಹಾತ್ಮಕ ಮಾಸನಿಯಾಮಕ ರಾಧಾಪತಿ ಶ್ರೀಪುರುಷೋತ್ತಮಾಯ ನಮಃ ॥

**ಅಥ ಧ್ಯಾನಮ್-** ಶ್ರೀವತ್ಸವಕ್ಷಸಂ ಶಾಂತಂ ನೀಲೋತ್ಪಲದಲಚ್ಛವಿಮ್ ।
ತ್ರಿಭಂಗಲಲಿತಂ ಧ್ಯಾಯೇತ್ಸರಾಧಂ ಪುರುಷೋತ್ತಮಮ್ ॥
ಶ್ರೀರಾಧಿಕಾಸಮೇತ ಪುರುಷೋತ್ತಮಾಯ ನಮಃ ।
ಧ್ಯಾಯಾಮಿ । ಧ್ಯಾನಂ ಸಮರ್ಪಯಾಮಿ ॥
ಉದ್ಯತ್ ಭಾಸ್ವತ್ಸಮಾಭಾಸ....ನಿತ್ಯನಿಶ್ಶೇಷಶಕ್ತಿಮಾನ್ ।

**ಆವಾಹನಮ್-** ಆಗಚ್ಛದೇವದೇವೇಶ ಶ್ರೀಕೃಷ್ಣಪುರುಷೋತ್ತಮ ।
ರಾಧಯಾಸಹಿತಶ್ಚಾತ್ರ ಗೃಹಾಣ ಪೂಜನಂ ಮಮ ॥
ಶ್ರೀರಾಧಿಕಾ ... ... । ಆವಾಹಯಾಮಿ । ಆವಾಹನಂ ... ॥

**ಆಸನಮ್-** ನಾನಾರತ್ನ ಸಮಾಯುಕ್ತಂ ಕಾರ್ತಸ್ವರ ವಿಭೂಷಿತಂ ।
ಆಸನಂ ದೇವದೇವೇಶ ಗೃಹಾಣ ಪುರುಷೋತ್ತಮ ॥
ಶ್ರೀರಾಧಿಕಾ ... ... । ಆಸನಂ ... ॥

**ಪಾದ್ಯಮ್-** ಗಂಗಾದಿ ಸರ್ವತೀರ್ಥೇಭ್ಯೋ ಮಯಾ ಪ್ರಾರ್ಥನಯಾಽಽಹೃತಂ ।
ತೊಯಮೇತತ್ಸುಖಸ್ಪರ್ಶಂ ಪಾದ್ಯಾರ್ಥಂ ಪ್ರತಿಗೃಹ್ಯತಾಂ ॥
ಶ್ರೀರಾಧಿಕಾ ... ... । ಪಾದ್ಯಂ ... ॥

**ಅರ್ಘ್ಯಮ್-** ನಂದಗೋಪಗೃಹೇ ಜಾತೋ ಗೋಪಿಕಾನಂದಹೇತವೇ ।
ಗೃಹಾಣಾರ್ಘ್ಯಂ ಮಯಾದತ್ತಂ ರಾಧಯಾ ಸಹಿತೋ ಹರೇ ॥
ಶ್ರೀರಾಧಿಕಾ ... ... । ಅರ್ಘ್ಯಂ ... ॥

**ಆಚಮನಮ್-** ಗಂಗಾಜಲಂ ಸಮಾನೀತಂ ಸುವರ್ಣಕಲಶಸ್ಥಿತಂ ।
ಆಚಮ್ಯತಾಂ ಹೃಷೀಕೇಶ ಪುರಾಣ ಪುರುಷೋತ್ತಮ ॥
ಶ್ರೀರಾಧಿಕಾ ... ... । ಆಚಮನಂ ... ॥

**ಪಂಚಾಮೃತ-** ಕಾರ್ಯಂಮೇ ಸಿದ್ಧಿಮಾಯಾತು ಪೂಜಿತೇ ತ್ವಯಿ ಧಾತರಿ ।



**ಸ್ನಾನಮ್-** ಪಂಚಾಮೃತೈರ್ಮಯಾಽಽನೀತೈಃ ರಾಧಿಕಾಸಹಿತೋ ಹರೇ ॥
ಪಯೋದಧಿಘೃತಂ ಗವ್ಯಂಮಾಕ್ಷಿಕಂ ಶರ್ಕರಾ ತಥಾ ।
ಗೃಹಾಣೇಮಾನಿ ದ್ರವ್ಯಾಣಿ ರಾಧಿಕಾನಂದದಾಯಕ ॥
ಶ್ರೀರಾಧಿಕಾ ... ... । ಪಂಚಾಮೃತಸ್ನಾನಂ ... ॥

**ಸ್ನಾನಮ್-** ಯೋಗೇಶ್ವರಾಯ ದೇವಾಯ ಗೋವರ್ಧನಧರಾಯ ಚ ।
ಯಜ್ಞಾನಾಂಪತಯೇನಾಥ ಗೋವಿಂದಾಯ ನಮೋನಮಃ ॥
ಗಂಗಾಜಲಸಮಂ ಶೀತಂ ನದೀತೀರ್ಥ ಸಮದ್ಭವಂ ।
ಸ್ನಾನಂ ದತ್ತಂ ಮಯಾ ಕೃಷ್ಣ ಗೃಹ್ಯತಾಂ ನಂದನಂದನ ॥
ಶ್ರೀರಾಧಿಕಾ ... ... । ಪುನಃ ಸ್ನಾನಂ ... ॥

**ವಸ್ತ್ರಂ-** ಪೀತಾಂಬರಯುಗಂ ದೇವ ಸರ್ವ ಕಾಮಾರ್ಥಸಿದ್ಧಯೇ ।
ಮಯಾ ನಿವೇದಿತಂ ಭಕ್ತ್ಯಾ ಗೃಹಾಣ ಸುರಸತ್ತಮ ॥
ಶ್ರೀರಾಧಿಕಾ ... ... । ವಸ್ತ್ರಂ ... ॥
ಪುನರಾಚಮನಂ ಸಮರ್ಪಯಾಮಿ ॥

**ಯಜ್ಞೋಪವೀತಂ-** ದಾಮೋದರ ನಮಸ್ತೇಸ್ತು ತ್ರಾಹಿಮಾಂ ಭವಸಾಗರಾತ್ ।
ಬ್ರಹ್ಮಸೂತ್ರಂ ಸೋತ್ತರೀಯಂ ಗೃಹಾಣ ಪುರುಷೋತ್ತಮ ॥
ಶ್ರೀರಾಧಿಕಾ ... ... । ಉಪವೀತಂ ... ॥
ಪುನರಾಚಮನಂ ಸಮರ್ಪಯಾಮಿ ।

**ಗಂಧಃ-** ಶ್ರೀಖಂಡಂ ಚಂದನಂ ದಿವ್ಯಂ ಗಂಧಾಢ್ಯಂ ಸುಮನೋಹರಂ ।
ವಿಲೇಪನಂ ಸುರಶ್ರೇಷ್ಠ ಪ್ರೀತ್ಯರ್ಥಂ ಪ್ರತಿಗೃಹ್ಯತಾಂ ॥
ಶ್ರೀರಾಧಿಕಾ ... ... । ಚಂದನಂ ... ॥

**ಅಕ್ಷತಾಃ-** ಅಕ್ಷತಾಸ್ತು ಸುರಶ್ರೇಷ್ಠ ಕುಂಕುಮಾಕ್ತಾಃ ಸುಶೋಭಿತಾಃ ।
ಮಯಾ ನಿವೇದಿತಾ ಭಕ್ತ್ಯಾ ಗೃಹಾಣ ಪುರುಷೋತ್ತಮ ॥
ಶ್ರೀರಾಧಿಕಾ ... ... । ಅಕ್ಷತಾಃ ... ॥

**ಪುಷ್ಪಮ್-** ಮಾಲ್ಯಾದೀನಿ ಸುಗಂಧೀನಿ ಮಾಲತ್ಯಾದೀನಿ ವೈ ಪ್ರಭೋ ।
ಮಯಾಽಽಹೃತಾನಿ ಪೂಜಾರ್ಥಂ ಪುಷ್ಪಾಣಿ ಪ್ರತಿಗೃಹ್ಯತಾಂ ॥
ಶ್ರೀರಾಧಿಕಾ ... ... । ಪುಷ್ಪಾಣಿ ... ॥

**ಅಥಾಂಗಪೂಜಾ-** ಓಂ ಶ್ರೀನಂದಾತ್ಮಜಾಯನಮಃ । ಪಾದೌ ಪೂಜಯಾಮಿ ।
ಓಂ ಶ್ರೀಯಶೋದಾತನಯಾಯ ನಮಃ । ಗುಲ್ಫೌ ... ।
ಓಂ ಶ್ರೀಕೇಶಿಸೂದನಾಯ ನಮಃ । ಜಾನುನೀ ... ।

ಓಂ ಶ್ರೀಭೂಭಾರೋತ್ತಾರಕಾಯ ನಮಃ । ಜಘನೇ ... ।
ಓಂ ಶ್ರೀಅನಂತಾಯ ನಮಃ । ಕಟಿಂ ಪೂಜಯಾಮಿ ... ।
ಓಂ ಶ್ರೀವಿಷ್ಣುರೂಪಧೃಷೇ ನಮಃ । ಮೇಢ್ರಂ ... ।
ಓಂ ಶ್ರೀಪ್ರದ್ಯುಮ್ನಾಯ ನಮಃ । ನಾಭಿಂ ... ।
ಓಂ ಶ್ರೀಅನಿರುದ್ಧಾಯ ನಮಃ । ಹೃದಯಂ ... ।
ಓಂ ಶ್ರೀಶ್ರೀಕಂಠಾಯ ನಮಃ । ಕಂಠಂ ... ।
ಓಂ ಶ್ರೀಸಕಲಾಸ್ತ್ರಧೃಷೇ ನಮಃ । ಬಾಹೂ ... ।
ಓಂ ಶ್ರೀವಾಚಸ್ಪತಯೇ ನಮಃ । ಮುಖಂ ... ।
ಓಂ ಶ್ರೀಕೇಶವಾಯ ನಮಃ । ನೇತ್ರೇ ಪೂಜಯಾಮಿ ।
ಓಂ ಶ್ರೀಸರ್ವಾತ್ಮನೇ ನಮಃ । ಶಿರಃ ಪೂಜಯಾಮಿ ।

ಶ್ರೀರಾಧಿಕಾಸಹಿತ ಪುರುಷೋತ್ತಮಾಯ ನಮಃ । ಸರ್ವಾಂಗಾಣಿ ಪೂಜಯಾಮಿ ।
ಇತ್ಯಂಗಪೂಜಾಂ ಸಮರ್ಪಯಾಮಿ ॥
ಓಂ ಶ್ರೀ ಕೇಶವಾಯ ನಮಃ । ... ... । ಓಂ ಶ್ರೀಕೃಷ್ಣಾಯ ನಮಃ ॥
ಇತಿ ನಾಮಪೂಜಾಂ ಸಮರ್ಪಯಾಮಿ ॥
ನಾನಾವಿಧ ಪರಿಮಳಪುಷ್ಪಾಣಿ ಸಮರ್ಪಯಾಮಿ ॥
ವಿಷ್ಣುಸಹಸ್ರನಾಮ ಹಾಗೂ ಬ್ರಹ್ಮಸೂತ್ರಗಳಿಂದ, ತುಲಸಿ-ಪುಷ್ಪಗಳಿಂದ ಅರ್ಚನೆ.

**ಧೂಪಃ–** ವನಸ್ಪತಿರಸೋದಿವ್ಯೋ ಗಂಧಾಢ್ಯೋ ಗಂಧ ಉತ್ತಮಃ ।
ಆಘ್ರೇಯಃ ಸರ್ವದೇವಾನಾಂ ಧೂಪೋಽಯಂ ಪ್ರತಿಗೃಹ್ಯತಾಂ ॥
ಶ್ರೀರಾಧಿಕಾ ... ... । ಧೂಪಂ ಸಮರ್ಪಯಾಮಿ ... ॥

**ದೀಪಃ–** ತ್ವಂ ಜ್ಯೋತಿಃ ಸರ್ವದೇವಾನಾಂ ತೇಜಸಾಂ ತೇಜಉತ್ತಮಂ ।
ಆತ್ಮಜ್ಯೋತಿಃ ಪರಂಧಾಮ ದೀಪೋಽಯಂ ಪ್ರತಿಗೃಹ್ಯತಾಂ ॥
ಶ್ರೀರಾಧಿಕಾ ... ... । ದೀಪಂ ... ॥

**ನೈವೇದ್ಯಂ–** ನೈವೇದ್ಯಂ ಗೃಹ್ಯತಾಂ ದೇವ ಭಕ್ತಿಂ ಮೇ ಹ್ಯಚಲಾಂ ಕುರು ।
ಈಪ್ಸಿತಂ ಮೇ ವರಂ ದೇಹಿ ಪರತ್ರ ಚ ವರಾಂ ಗತಿಂ ॥
ಶ್ರೀರಾಧಿಕಾ ... ... । ನೈವೇದ್ಯಂ ... ॥
ಘೃತಪಕ್ವ ಅಪೂಪಾನಿ ನೈವೇದ್ಯ ಸಮರ್ಪಯಾಮಿ ।
ಮಧ್ಯೆ ಪಾನೀಯಂ ಸಮರ್ಪಯಾಮಿ ॥ ಉತ್ತರಾಪೋಶನಂ ... ॥

**ಆಚಮನಮ್–** ಗಂಗಾಜಲಂ ಸಮಾನೀತಂ ಸುವರ್ಣಕಲಶಸ್ಥಿತಂ ।
ಆಚಮ್ಯತಾಂ ಹೃಷೀಕೇಶ ತ್ರೈಲೋಕ್ಯವ್ಯಾಧಿನಾಶನ ॥
ಶ್ರೀರಾಧಿಕಾ ... ... । ಆಚಮನಂ ... ॥



**ಫಲಮ್–** ಇದಂ ಫಲಂ ಮಯಾದೇವ ಸ್ಥಾಪಿತಂ ಪುರತಸ್ತವ ।
ತೇನ ಮೇ ಸುಫಲಾವ್ಯಾಪ್ತಿಃ ಭವೇಜ್ಜನ್ಮನಿಜನ್ಮನಿ ॥
ಶ್ರೀರಾಧಿಕಾ ... ... । ಶ್ರೀಫಲಂ ... ॥

**ಕರೋದ್ವರ್ತನಮ್–** ಗಂಧ ಕರ್ಪೂರ ಸಂಯುಕ್ತಂ ಕಸ್ತೂರ್ಯಾದಿ ಸುವಾಸಿತಂ ।
ಕರೋದ್ವರ್ತನಕಂ ದೇವ ಗೃಹಾಣ ಪರಮೇಶ್ವರ ॥
ಶ್ರೀರಾಧಿಕಾ ... ... । ಕರೋದ್ವರ್ತನಂ ... ॥

**ತಾಂಬೂಲ–** ಪೂಗೀಫಲಸಮಾಯುಕ್ತಂ ಸಕರ್ಪೂರಂ ಮನೋಹರಂ ।
ಭಕ್ತ್ಯಾ ದತ್ತಂ ಮಯಾ ದೇವ ತಾಂಬೂಲಂ ಪ್ರತಿಗೃಹ್ಯತಾಂ ॥
ಶ್ರೀರಾಧಿಕಾ ... ... । ತಾಂಬೂಲಂ ... ॥

**ದಕ್ಷಿಣಾ–** ಹಿರಣ್ಯಗರ್ಭ ಗರ್ಭಸ್ಥಂ ಹೇಮಬೀಜಂ ವಿಭಾವಸೋಃ ।
ಅನಂತಪುಣ್ಯಫಲದಮತಃ ಶಾಂತಿಂ ಪ್ರಯಚ್ಛ ಮೇ ॥
ಶ್ರೀರಾಧಿಕಾ ... ... । ದಕ್ಷಿಣಾಂ ... ॥

**ನೀರಾಜನಮ್–** ಶಾರದೇಂದೀವರಶ್ಯಾಮಂ ತ್ರಿಭಂಗ ಲಲಿತಾಕೃತಿಂ ।
ನೀರಾಜಯಾಮಿ ದೇವೇಶಂ ರಾಧಯಾ ಸಹಿತಂ ಹರಿಂ ॥
ಶ್ರೀರಾಧಿಕಾ ... ... । ನೀರಾಜನಂ ... ॥

**ಪ್ರದಕ್ಷಿಣಾಃ–** ರಕ್ಷ ರಕ್ಷ ಜಗನ್ನಾಥ ರಕ್ಷ ತ್ರೈಲೋಕ್ಯ ನಾಯಕ ।
ಭಕ್ತಾನುಗ್ರಹಕರ್ತಾ ತ್ವಂ ಪ್ರದಕ್ಷಿಣಾಂ ಗೃಹಾಣ ಮೇ ॥
ಶ್ರೀರಾಧಿಕಾ ... ... । ಪ್ರದಕ್ಷಿಣಾಂ ... ॥

**ಮಂತ್ರಪುಷ್ಪಮ್–** ಯಜ್ಞೇಶ್ವರಾಯದೇವಾಯ ತಥಾಯಜ್ಞೋದ್ಭವಾಯ ಚ ।
ಯಜ್ಞಾನಾಂ ಪತಯೇನಾಥ ಗೋವಿಂದಾಯ ನಮೋನಮಃ ॥
ಶ್ರೀರಾಧಿಕಾ ... ... । ಮಂತ್ರಪುಷ್ಪಂ ... ॥

**ನಮಸ್ಕಾರಾಃ–** ವಿಶ್ವೇಶ್ವರಾಯ ವಿಶ್ವಾಯ ತಥಾ ವಿಶ್ವೋದ್ಭವಾಯ ಚ ।
ವಿಶ್ವಸ್ಯಪತಯೇ ತುಭ್ಯಂ ಗೋವಿಂದಾಯ ನಮೋನಮಃ ॥
ಶ್ರೀರಾಧಿಕಾ ... ... । ನಮಸ್ಕಾರಾನ್ ... ॥

ಮುವತ್ತಮೂರು ನಮಸ್ಕಾರಗಳನ್ನು ಹಾಕಬೇಕು.

॥ ಅನೇನ ಪುರುಷೋತ್ತಮಪೂಜಾವಿಧಾನೇನ ಭಾರತೀರಮಣ
ಮುಖ್ಯಪ್ರಾಣಾಂತರ್ಗತ ರಾಧಿಕಾಸಮೇತ ಶ್ರೀಪುರುಷೋತ್ತಮಃ ಪ್ರೀಯತಾಂ ॥

॥ ಶ್ರೀಕೃಷ್ಣಾರ್ಪಣಮಸ್ತು ॥

॥ ಇತಿ ಶ್ರೀಬೃಹನ್ನಾರದೀಯ ಪುರಾಣೋಕ್ತ
ಪುರುಷೋತ್ತಮಪೂಜಾವಿಧಿಃ ಸಮಾಪ್ತಾ ॥

## ಅಪೂಪ (ಅತಿರಸ-ಅನರಸ)ಗಳ ದಾನ ವಿಧಾನ

ಒಂದು ತಿಂಗಳು ಪೂರ್ತಿಯಾಗಿ ಮುವ್ವತ್ತಮೂರು (೩೩) ಅತಿರಸ (ಅಪೂಪ)ವನ್ನು ವಿಪ್ರನಿಗೆ ದಾನ ಮಾಡಬೇಕು. ಮುವ್ವತ್ತಮೂರಕ್ಕೆ ಕಡಿಮೆಯಾಗದಂತೆ ದಾನಮಾಡಬೇಕೆಂದು ಅರ್ಥವೇ ವಿನಃ ಸಂಖ್ಯೆಯಲ್ಲಿ ಮುವ್ವತ್ತಮೂರೇ ದಾನ ಕೊಡಬೇಕೆಂಬ ನಿಯಮವಿಲ್ಲ. ಅಧಿಕಮಾಸದಲ್ಲಿ ಪ್ರತಿದಿವಸ ಅಪೂಪದ ಜೊತೆಗೆ ಮುವ್ವತ್ತಮೂರು ಅಥವಾ ಅಧಿಕ ಸಂಖ್ಯೆಯಲ್ಲಾಗಲೀ ಬಾಳೆಹಣ್ಣು, ಮಾವಿನ ಹಣ್ಣು, ಹಲಸಿನ ಹಣ್ಣಿನ ತೊಳೆಗಳು ಇವುಗಳನ್ನು ದಾನಮಾಡಬಹುದು. ಶಾಕವ್ರತ ಇದ್ದಾಗ ಹಣ್ಣುಗಳ ದಾನ ಇಲ್ಲ.

**ಅಧಿಮಾಸೇ ತು ಸಂಪ್ರಾಪ್ತೇ ಗುಡಸರ್ಪಿರ್ಯುತಾನಿ ಚ ।**
**ತ್ರಯಸ್ತ್ರಿಂಶದಪೂಪಾನಿ ದಾತವ್ಯಾನಿ ದಿನೇ ದಿನೇ ॥**

**ಬಾಗಿಣದಾನ :** ಸ್ತ್ರೀಯರು ಅಧಿಕಮಾಸದಲ್ಲಿ ೩೩ ಮುತ್ತೈದೆಯರುಗಳಿಗೆ ಮುವ್ವತ್ತಮೂರು ಬಾಗಿಣವನ್ನು ದಾನಮಾಡಬೇಕು. ಇದರ ಜೊತೆಗೆ ೩೩ ಅಪೂಪಗಳನ್ನೂ ಒಂದು ಕಂಚಿನ ಪಾತ್ರೆಯಲ್ಲಿ ಹಾಕಿ ಅದನ್ನೂ ದಾನ ಮಾಡಬೇಕು. ಒಂದು ತಿಂಗಳು ಪೂರ್ತಿಯಾಗಿ ದಾನಮಾಡಲು ಶಕ್ತಿಯಿಲ್ಲದವರು ಈ ಕೆಳಗಿನ ವಿಶೇಷ ದಿವಸಗಳಲ್ಲಾದರೂ ದಾನ ಮಾಡಬೇಕು.

ಶುಕ್ಲಪಕ್ಷದ ದ್ವಾದಶೀ, ಕೃಷ್ಣಪಕ್ಷದ ದ್ವಾದಶೀ ಪೂರ್ಣಿಮೆ ಹಾಗೂ ಅಮಾವಾಸ್ಯೆಗಳು, ಕೃಷ್ಣಪಕ್ಷದ ಅಷ್ಟಮೀ, ನವಮೀ ಹಾಗೂ ಚತುರ್ದಶಿ ದಿವಸಗಳಲ್ಲಾದರೂ ಅಪೂಪಾದಿಗಳನ್ನು ದಾನಮಾಡಬಹುದು. ಅದೇ ರೀತಿ ವೈಧೃತಿ, ವ್ಯತೀಪಾತಾದಿ ವಿಶೇಷ ದಿವಸಗಳಲ್ಲಾದರೂ ದಾನ ಮಾಡಬಹುದು.

ಅಪೂಪವನ್ನು ಅಕ್ಕಿಯಿಂದ ತಯಾರಿಸಿರಬೇಕು. ಬೆಲ್ಲ-ತುಪ್ಪಗಳಿಂದ ಮಿಶ್ರಿತವಾಗಿರಬೇಕು. ಹೀಗೆ ತಯಾರಿಸಿದ ಅಪೂಪವು ಸಮಸ್ತ ದೇವತೆಗಳಿಗೂ ಅವರಲ್ಲೂ ಮುವ್ವತ್ತಮೂರು ದೇವತೆಗಳಿಗೆ ಪ್ರೀತಿಯನ್ನುಂಟುಮಾಡುವುದು. ಈ ದಾನದಿಂದ ಪೃಥಿವಿಯನ್ನು ದಾನಮಾಡಿದರೆ ಬರುವ ಪುಣ್ಯವು ಲಭಿಸುವುದು.

**ದಾನಕ್ರಮ :** ಮುವ್ವತ್ತಮೂರು ಅಪೂಪಗಳನ್ನು ತಯಾರಿಸಿ ಒಂದು ಕಂಚಿನ ಪಾತ್ರೆಯಲ್ಲಿ ಇಟ್ಟು, ಬೇರೆ ಪಾತ್ರೆಯಲ್ಲಿ ತುಪ್ಪವನ್ನು ಇಟ್ಟು ಹಿರಣ್ಯ ಸಹಿತವಾಗಿ ದಾನಮಾಡಬೇಕು.



**ತ್ರಯಸ್ತ್ರಿಂಶದಪೂಪಾನ್ನಂ ಕಾಂಸ್ಯಪಾತ್ರೇ ನಿಧಾಯ ಚ ।**
**ಸಘೃತಂ ಸಹಿರಣ್ಯಂ ಚ ಬ್ರಾಹ್ಮಣಾಯ ನಿವೇದಯೇತ್ ॥**

ಹಿರಣ್ಯವು ದಾನ ಮಾಡಲು ಶಕ್ತಿಯಿಲ್ಲದಿರುವಾಗ ಮುವ್ವತ್ತಮೂರು ರೂಪಾಯಿಗಳನ್ನು ದಾನಮಾಡಬಹುದು.

ಮೊದಲು ದೇವರ ಎದುರಿನಲ್ಲಿ ಮಂಡಲವನ್ನು ಮಾಡಿ ಅದರ ಮೇಲೆ ಬೆಳ್ಳಿಯ, ತಾಮ್ರದ ಅಥವಾ ಹಿತ್ತಾಳೆಯ ಪಾತ್ರೆಯನ್ನು ಇಟ್ಟು ಕೆಳಗೆ ಕೊಟ್ಟ ಹೆಸರುಗಳನ್ನು ಹೇಳುತ್ತಾ ಆ ಪಾತ್ರೆಯಲ್ಲಿ ೩೩ ಅಪೂಪಗಳನ್ನು ಇಡಬೇಕು.

## ಅಧಿಕಮಾಸದಲ್ಲಿ ದಾನ ಕೊಡುವ ಪೂರ್ವದಲ್ಲಿ ಹೇಳಬೇಕಾದ ದೇವತಾನಾಮಗಳು

**ಅಷ್ಟವಸುಗಳು – ೮**

| | | | | |
|---|---|---|---|---|
| ದ್ರೋಣಾಂತರ್ಗತ | ಭಾರತೀರಮಣ | ಮುಖ್ಯಪ್ರಾಣಾಂತರ್ಗತ | ವಿಷ್ಣವೇ | ನಮಃ |
| ಧ್ರುವಾಂತರ್ಗತ | " | " | ಜಿಷ್ಣವೇ | ನಮಃ |
| ದೋಷಾಂತರ್ಗತ | " | " | ಮಹಾವಿಷ್ಣವೇ | ನಮಃ |
| ಅರ್ಕಾಂತರ್ಗತ | " | " | ಸುಶೀಲಾಪತಿ ಹರಯೇ | ನಮಃ |
| ಅಗ್ನ್ಯಂರ್ಗತ | " | " | ಸುಲಕ್ಷಣಾಪತಿ ಶ್ರೀಕೃಷ್ಣಾಯ | ನಮಃ |
| ದ್ವ್ಯಂತರ್ಗತ | " | " | ಶ್ರೀಪತಿಕೇಶವಾಯ | ನಮಃ |
| ಪ್ರಾಣಾಂತರ್ಗತ | " | " | ಪ್ರಜ್ಞಾಪತಿ ಅಧೋಕ್ಷಜಾಯ | ನಮಃ |
| ವಿಭಾವಸ್ವಂತರ್ಗತ | " | " | ಕಮಲಾವತಿ ಮಾಧವಾಯ | ನಮಃ |

**ಏಕಾದಶಿರುದ್ರರು – ೧೧**

| | | | | |
|---|---|---|---|---|
| ಭೀಮಾಂತರ್ಗತ | " | " | ಸೀತಾಪತಿ ಶ್ರೀರಾಮಾಯ | ನಮಃ |
| ರೈವತಾಂತರ್ಗತ | " | " | ಸುಗಂಧಾಪತಿ ಅಚ್ಯುತಾಯ | ನಮಃ |
| ಓಜಾಂತರ್ಗತ | " | " | ಅನಂದಾಧಿಪತಿ ಪುರುಷೋತ್ತಮ | ನಮಃ |
| ಆಜೈಕಪಾದಾಂತರ್ಗತ | " | " | ಪದ್ಮಾವತಿಪತಿ ಗೋವಿಂದಾಯ | ನಮಃ |
| ಮಹಾನಂತರ್ಗತ | ಭಾರತೀರಮಣ | ಮುಖ್ಯಪ್ರಾಣಾಂತರ್ಗತ | ವೃಷಾಕಪಿಪತಿ ವಾಮನಾಯ | ನಮಃ |
| ಬಹುರೂಪಾಂತರ್ಗತ | " | " | ಶ್ರೀಪತಿ ಶ್ರೀಶಾಯ | ನಮಃ |
| ಭವಾಂತರ್ಗತ | " | " | ಶ್ರೀಕಂಠಾಯ | ನಮಃ |
| ವಾಮದೇವಾಂತರ್ಗತ | " | " | ವಿಶ್ವಸಾಕ್ಷಿಣೇ | ನಮಃ |
| ಉಗ್ರಾಂತರ್ಗತ | " | " | ಲಕ್ಷ್ಮೀಪತಿ ನಾರಾಯಣಾಯ | ನಮಃ |
| ವೃಷಾಕಪ್ಯಂತರ್ಗತ | ಮುಖ್ಯಪ್ರಾಣಾಂತರ್ಗತ | ಭಾರತೀರಮಣ | ಕಮಲಾಪತಿ ಮಧುಸೂದನಾಯ | ನಮಃ |
| ಅಹಿರ್ಬುದ್ನ್ಯಂತರ್ಗತ | " | " | ನಿತ್ಯಾಪತಿ ಅನಿರುದ್ಧಾಯ | ನಮಃ |

**ದ್ವಾದಶಾದಿತ್ಯರು - ೧೨**

| | | | | |
|---|---|---|---|---|
| ವಿವಸ್ವಾನಂತರ್ಗತ | " | " | ರಮಾಪತಿ ತ್ರಿವಿಕ್ರಮಾಯ | ನಮಃ |
| ಅರ್ಯಮಾಂತರ್ಗತ | " | " | ಹರಿಣೀಪತಿ ವಾಸುದೇವಾಯ | ನಮಃ |
| ಪೂಷಾಂತರ್ಗತ | " | " | ಶ್ರೀಜಗದ್ಯೋನಯೇ | ನಮಃ |
| ತ್ವಷ್ಟಾಂತರ್ಗತ | " | " | ಶ್ರೀಅನಂತಾಯ | ನಮಃ |
| ಸವಿತ್ರಂತರ್ಗತ | " | " | ಶ್ರೀಶೇಷಶಾಯಿನೇ | ನಮಃ |
| ಭಗಾಂತರ್ಗತ | " | " | ಹಿರಣ್ಯಾಪತಿ ಸಂಕರ್ಷಣಾಯ | ನಮಃ |
| ಧಾತ್ರಂತರ್ಗತ | " | " | ಸತ್ಯಾಪತಿ ಪ್ರದ್ಯುಮ್ನಾಯ | ನಮಃ |
| ಸರ್ಜನ್ಯಾಂತರ್ಗತ | " | " | ದೈತ್ಯಾರಯೇ | ನಮಃ |
| ವರುಣಾಂತರ್ಗತ | " | " | ವಿಶ್ವಾತ್ಮನೇ | ನಮಃ |
| ಮಿತ್ರಾಂತರ್ಗತ | " | " | ಕಂಸದಮನಾಯ | ನಮಃ |
| ಶಕ್ರಾಂತರ್ಗತ | " | " | ಶ್ರೀವಿಶ್ವತೋಮುಖಾಯ | ನಮಃ |
| ಉರುಕ್ರಮಾಂತರ್ಗತ | " | " | ಸುಂಧರೀಪತಿ ಜನಾರ್ದನಾಯ | ನಮಃ |
| ಪ್ರಜಾಪತ್ಯಂತರ್ಗತ - ೧ | " | " | ಶ್ರೀಧರ ವ್ಯಾಸಾಯ | ನಮಃ |
| ವಷಟ್ಕಾರಾಂತರ್ಗತ - ೧ | " | " | ಶ್ರೀಪತಯೇ | ನಮಃ |

**ಪ್ರತಿಯೊಂದು ನಾಮಾವಳಿಯ ಕೊನೆಗೆ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ಎಂದೂ ಹೇಳಬೇಕು. ಅನಂತರ ಅದರ ಮೇಲೆ ಇನ್ನೊಂದು ಪಾತ್ರೆ ಮುಚ್ಚಳಿಯನ್ನು ಮುಚ್ಚಿ ಈ ರೀತಿ ಸಂಕಲ್ಪ ಮಾಡಬೇಕು.**

**ಅಪೂಪ ದಾನಸಂಕಲ್ಪ :** ಆಚಮ್ಯ - ಪ್ರಾಣಾನಾಯಮ್ಯ - ದೇಶಕಾಲೌ ಸಂಕೀರ್ತ್ಯ ಅಷ್ಟವಸು, ಏಕಾದಶರುದ್ರ, ದ್ವಾದಶಾದಿತ್ಯ ಪ್ರಜಾಪತಿ, ವೌಷಟ್‌ಕಾರಾಖ್ಯ ತ್ರಯಸ್ತ್ರಿಂಶತ್ ದೇವತಾಂತರ್ಗತ ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀವಿಷ್ವಾದಿ ತ್ರಯಸ್ತ್ರಿಂಶನ್ನಾಮಧಾರಿ ಮಲಮಾಸದೇವತಾಭಿನ್ನ ಶ್ರೀಪುರುಷೋತ್ತಮ ಪ್ರೇರಣಯಾ ಶ್ರೀಪುರುಷೋತ್ತಮ ಪ್ರೀತ್ಯರ್ಥಂ ಪೃಥ್ವೀದಾನ ಸಮಫಲಂ ತ್ರಯಸ್ತ್ರಿಂಶತ್ ಅಪೂಪ ದಾನಮಹಂ ಕರಿಷ್ಯೆ ।

**ಕಾಮಸಂಕಲ್ಪ :** ಮಮ ನಿಖಿಲ ಪಾಪಶಮನ ಪೂರ್ವಕ ಪುತ್ರ ಪೌತ್ರಾದಿ ಧನ ಧಾನ್ಯಾದಿ ಕ್ಷೇಮಸಮೃದ್ಧಿ ಲೋಕದ್ವಯ ಸುಖಹೇತುಭೂತ ಭೂದಾನ ಫಲಾವಾಪ್ತ್ಯೈ ಅಪೂಪಚ್ಛಿದ್ರ ಸಮಸಂಖ್ಯ ವರ್ಷ ಸಹಸ್ರಾವಧಿ ಸ್ವರ್ಲೋಕ ನಿವಾಸಸಿದ್ಧ್ಯರ್ಥಂ ಮಲಮಾಸಪ್ರಯುಕ್ತಂ ಅಪೂಪದಾನಮಹಂ ಕರಿಷ್ಯೆ!



**ತದಂಗ ಪುರುಷೋತ್ತಮ ಪೂಜಾಂ ಕರಿಷ್ಯೆ ।**
**ತಥಾ ಬ್ರಾಹ್ಮಣ ಸುವಾಸಿನಿ ಪೂಜಾಂ ಚ ಕರಿಷ್ಯೆ ॥**

ಅಸ್ಮಿನ್ ಬ್ರಾಹ್ಮಣೇ ಪುರುಷೋತ್ತಮಂ ಆವಾಹಯಿಷ್ಯೇ ಎಂದು ಹೇಳಿ ಮಂತ್ರಾಕ್ಷತೆಯನ್ನು ಬ್ರಾಹ್ಮಣನ ಮೇಲೆ ಹಾಕಬೇಕು.

**ವಿಷ್ಣು ಪ್ರಾರ್ಥನಾ ಮಂತ್ರ :**

**ಚಂದ್ರಾಂಶುನಿರ್ಮಲಾಃಪೂಪಾಃ ಶಾಲಿಗೋಧೂಮನಿರ್ಮಿತಾಃ ।**
**ಆಹಾರಃ ಸರ್ವದೇವಾನಾಂ ತೇ ಮೇ ಕುರ್ವಂತು ಮಂಗಲಂ ॥**

**ವಿಷ್ಣುರೂಪೀ ಸಹಸ್ರಾಂಶುಃ ಸರ್ವಪಾಪವಿನಾಶನಃ ।**
**ಅಪೂಪಾನ್ನಪ್ರದಾನೇನ ಮಮ ಪಾಪಂ ವ್ಯಪೋಹತು ॥**

**ಕುರುಕ್ಷೇತ್ರಮಯಂ ದೇಶಃ ಕಾಲಃ ಸರ್ವದ್ವಿಜೋ ಹರಿಃ ।**
**ಪೃಥ್ವೀ ಸಮಮಿದಂ ದಾನಂ ಗೃಹಾಣ ಪುರುಷೋತ್ತಮ ॥**

**ಮಲಾನಾಂ ಚ ವಿಶುದ್ಧ್ಯರ್ಥಂ ಪಾಪಪ್ರಶಮನಾಯ ಚ ।**
**ಪುತ್ರ ಪೌತ್ರಾಭಿವೃದ್ಧ್ಯರ್ಥಂ ತವ ದಾಸ್ಯಾಮಿ ಭಾಸ್ಕರ ॥**

**ನಾರಾಯಣ ಜಗದ್ಬೀಜ ಭಾಸ್ಕರ ಪ್ರತಿರೂಪಕ ।**
**ವ್ರತೇನಾನೇನ ಪುತ್ರಾಂಶ್ಚ ಸಂಪದಂ ಚಾಪಿ ವರ್ಧಯ ॥**

**ಯಸ್ಯ ಹಸ್ತೇ ಗದಾಚಕ್ರೇ ಗರುಡೋ ಯಸ್ಯ ವಾಹನಃ ।**
**ಶಂಖಃ ಕರತಲೇ ಯಸ್ಯ ಸ ಮೇ ವಿಷ್ಣುಃ ಪ್ರಸೀದತು ॥**

**ಕಲಾ ಕಾಷ್ಠಾದಿರೂಪೇಣ ನಿಮೇಷ ಘಟಿಕಾದಿನಾ ।**
**ಯೋ ವಂಚಯತಿ ಭೂತಾನಿ ತಸ್ಮೈಕಾಲಾತ್ಮನೇ ನಮಃ ॥**

**ಅಪೂಪದಾನ - ಭಗವದ್ರೂಪಚಿಂತನೆ :**

**ವಿಷ್ಣುಂ ಜಿಷ್ಣುಂ ಮಹಾವಿಷ್ಣುಂ ಹರಿಂ ಕೃಷ್ಣಂ ಅಧೋಕ್ಷಜಂ ।**
**ಕೇಶವಂ ಮಾಧವಂ ರಾಮಂ ಅಚ್ಯುತಂ ಪುರುಷೋತ್ತಮಂ ॥**

**ಗೋವಿಂದಂ ವಾಮನಂ ಶ್ರೀಶಂ ಶ್ರೀಕಂಠಂ ವಿಶ್ವಸಾಕ್ಷಿಣಂ ।**
**ನಾರಾಯಣಂ ಮಧುರಿಪುಂ ಅನಿರುದ್ಧಂ ತ್ರಿವಿಕ್ರಮಂ ॥**

**ವಾಸುದೇವಂ ಜಗದ್ಯೋನಿಂ ಅನಂತಂ ಶೇಷಶಾಯಿನಂ ।**
**ಸಂಕರ್ಷಣಂ ಚ ಪ್ರದ್ಯುಮ್ನಂ ದೈತ್ಯಾರಿಂ ವಿಶ್ವತೋಮುಖಂ ॥**

**ಜನಾರ್ಧನಂ ಧರಾವಾಸಂ ದಾಮೋದರಮಘಾರ್ದನಂ ।**
**ಶ್ರೀಪತಿಂ ಚ ತ್ರಯಸ್ತ್ರಿಂಶದುದ್ದಿಶ್ಯ ಪ್ರತಿನಾಮಭಿಃ ॥**

**ಮಂತ್ರೈರೇತೈಶ್ಚ ಯೋ ದದ್ಯಾತ್ ತ್ರಯಸ್ತ್ರಿಂಶದಪೂಪಕಂ ।**
**ಪ್ರಾಪ್ನೋತಿ ವಿಪುಲಾಂ ಲಕ್ಷ್ಮೀಂ ಪುತ್ರ ಪೌತ್ರಾದಿ ಸಂತತಿಂ ॥**

**ಇದಂ ಸೋಪಸ್ಕರಂ ತ್ರಯಸ್ತ್ರಿಂಶದಪೂಪಂ ಸದಕ್ಷಿಣಾಕಂ, ಸತಾಂಬೂಲಂ, ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಪುರುಷೋತ್ತಮಸ್ಯ ಪ್ರೀತಿಂ ಕಾಮಯಮಾನಃ ತುಭ್ಯಮಹಂ ಸಂಪ್ರದದೇ ನ ಮಮ, ನ ಮಮ – ಇತಿ ನಮಸ್ಕುರ್ಯಾತ್ ।** - ಬ್ರಾಹ್ಮಣರು ಈ ಕೆಳಗಿನ ಮಂತ್ರ ಹೇಳಿ ಸ್ವೀಕಾರ ಮಾಡಬೇಕು.

**ತ್ವಯಾ ದತ್ತಮಿದಂ ಪಾತ್ರಂ ಪರಮಾನ್ನೇನ ಪೂರಿತಂ ।**
**ಸಘೃತಂ ಪ್ರತಿಗೃಹ್ಣಾಮಿ ಪ್ರೀಯತಾಂ ತೇ ದಿವಾಕರಃ ॥**

**ದಾನದ ಫಲ** : ಮೇಲ್ಕಂಡ ಮಂತ್ರಗಳಿಂದ ೩೩ ಅಪೂಪಗಳನ್ನು ಯಾರು ದಾನ ಮಾಡುತ್ತಾರೋ ಅವರಿಗೆ ವಿಪುಲವಾದ ಸಂಪತ್ತು, ಪುತ್ರ-ಪೌತ್ರಾದಿಗಳು ಪ್ರಾಪ್ತವಾಗುತ್ತದೆ.

**ಮಂತ್ರೇಣಾನೇನ ಯೋ ದದ್ಯಾತ್ ತ್ರಯಸ್ತ್ರಿಂಶದಪೂಪಕಾನ್ ।**
**ಪ್ರಾಪ್ನೋತಿ ವಿಪುಲಾಂ ಲಕ್ಷ್ಮೀಂ ಪುತ್ರ ಪೌತ್ರಾದಿ ಸಂಪದಃ ॥**

ದಾನಾನಂತರ ಬ್ರಾಹ್ಮಣ ಸುವಾಸಿನಿ ಸಂತರ್ಪಣೆಗೆ ಸಂಕಲ್ಪ ಮಾಡಿ ಬ್ರಾಹ್ಮಣರ ಆಶೀರ್ವಾದ ಪಡೆಯಬೇಕು.

**ಆಶೀರ್ವಾದ ಮಂತ್ರ :**

**ಶತಂ ಜೀವ ಶರದೋ ವರ್ಧಮಾನಶ್ಶತಂ ಹೇಮಂತಾನ್ಛತಮು ವಸಂರ್ತಾ ।**
**ಶತಮಿಂದ್ರಾಗ್ನೀ ಸವಿತಾ ಬೃಹಸ್ಪತಿಶ್ಶತಾಯುಷಾ ಹವಿಷೇಮಂ ಪುನರ್ದುಃ ॥**
**ಆಹಾರ್ಷಂ ತ್ವಾವಿಧಂ ತ್ವಾ ಪುನರಾಗಾಃ ಪುನರ್ನವ ।**
**ಸರ್ವಾಂಗ ಸರ್ವಂ ತೇ ಚಕ್ಷು ಸ್ಸರ್ವ ಮಾಯುಶ್ಚ ತೇ ವಿದಮ್ ॥**

ಯಸ್ಯ ಸ್ಮೃತ್ಯಾಚ ............... ಅನೇನ ಪುರುಷೋತ್ತಮ ಪೂಜಾ, ದಾನ, ಸಂತರ್ಪಣೇನ ಭಗವಾನ್ ಭಾರತೀರಮಣ ಮುಖ್ಯಪ್ರಾಣಾಂತರ್ಗತ ರಾಧಾ ಸಮೇತ ಶ್ರೀಪುರುಷೋತ್ತಮ ಪ್ರಿಯತಾಂ ಪ್ರೀತೋ ವರದೋ ಭವತು ॥ ಶ್ರೀಕೃಷ್ಣಾರ್ಪಣಮಸ್ತು ॥



## ಅಧಿಕಮಾಸದ ಕರ್ತವ್ಯಗಳು

**ಪಂಚವ್ರತ :**

೧. ಉಪವಾಸ : ಸಂಕಲ್ಪ ಮಾಡಿ ಈ ವ್ರತವನ್ನು ಗ್ರಹಣ ಮಾಡಬೇಕು.

**ಗೃಹ್ಣೀಯಾನ್ನಿಯಮಂ ಭಕ್ತ್ಯಾ ಶ್ರೀಕೃಷ್ಣಂ ಚ ಹೃದಿಸ್ಮರನ್ ।**
**ಉಪಷಣೇನ ಕರ್ತವ್ಯಃ ಶಕ್ತಿಶ್ಚೇತ್ಪುರುಷೋತ್ತಮಃ ॥**

ಶಕ್ತಿ ಇದ್ದವರು ತಿಂಗಳು ಪೂರ್ತಿ ಉಪವಾಸ ಮಾಡಬಹುದು.

**ಅಥವಾ ಘೃತಪಾನಂ ಚ ಕ್ಷಮಃ ಪಾನಮಯಾಚಿತಮ್ ।**
**ಫಲಾಹಾರಾದಿ ವಾ ಕಾರ್ಯಂ ಯಥಾಶಕ್ತ್ಯಾ ವ್ರತಾರ್ಥಿನಾ ॥**

ಅಶಕ್ತರು ಯಾರನ್ನು ಬೇಡದೆ ಲಭ್ಯವಾಗುವ ತುಪ್ಪ ಅಥವಾ ಹಾಲು ಅಥವಾ ಶಕ್ತ್ಯನುಸಾರ ಫಲಹಾರಾದಿಗಳನ್ನು ಸ್ವೀಕರಿಸಬಹುದು.

ಪುರುಷೋತ್ತಮ ಮಾಸದಲ್ಲಿ ಏಕಭುಕ್ತ, ಉಪವಾಸಗಳಿಗೆ ಅಧಿಕ ಫಲವಿದೆ. ಈ ಮಾಸದಲ್ಲಿ ಕೇವಲ ಒಂದು ದಿನ ಉಪವಾಸವನ್ನು ಮಾಡಿದರೂ ಅವರ ಅನಂತ ಪಾಪರಾಶಿಗಳೂ ಸುಟ್ಟು ಬೂದಿಯಾಗುವವು. (ಶ್ರವಣ, ವ್ಯತಿಪಾತ, ಪೂರ್ಣಿಮಾ, ವೈಧೃತಿ)

**ಏಕಮಪ್ಯಪ್ಯುಪವಾಸಂ ಯಃ ಕರೋತ್ಯಸ್ಮಿನ್ ತಪೋನಿಧೇ ।**
**ಅಸಾವನಂತಪಾಪಾನಿ ಭಸ್ಮೀಕೃತ್ಯ ದ್ವಿಜೋತ್ತಮ ॥**

೨. ನಕ್ತಭೋಜನ : ದಿನವಿಡೀ ಪೂಜಾ-ಪಾರಾಯಣಾದಿಗಳಲ್ಲಿ ಮಗ್ನರಾಗಿ ರಾತ್ರಿಯಲ್ಲಿ ಮಾತ್ರ ಭೋಜನ ಮಾಡುವುದು. ಇದರಿಂದ ವಿಶೇಷ ಭಗವದನುಗ್ರಹ ಪ್ರಾಪ್ತಿ.

**ಅಧಿಮಾಸೇ ನರೋ ನಕ್ತಂ ಯೋ ಭುಂಕ್ತೇ ಸನರಾಧಿಪ ।**
**ಸರ್ವಾನ್ ಕಾಮಾನವಾಪ್ನೋತಿ ನರೋ ನೈವಾತ್ರಸಂಶಯಃ ॥**

೩. ಏಕಭುಕ್ತ : ದೇವಪೂಜಾನಂತರ ಹರಿನೈವೇದ್ಯ ಸ್ವೀಕಾರ ಮಾಡಿ ಪುನಃ ಮಾರನೇ ದಿವಸದವರೆವಿಗೂ ಏನನ್ನೂ ಸ್ವೀಕರಿಸದೆ ಇರುವುದು.

**ಏಕಾನ್ನೇನ ನರೋಯಸ್ತು ಮಲಮಾಸಂ ನಿಷೇವತೇ ।**
**ಚತುರ್ಭುಜೋ ನರೋಭೂತ್ವಾ ಸ ಯಾತಿ ಪರಮಾಂಗತಿಮ್ ॥**
ವಿಷ್ಣು ಸಾಮೀಪ್ಯವನ್ನು ಹೊಂದುವುದು.

೪. ಅಯಾಚಿತವ್ರತ : ಯಾರನ್ನೂ ಏನನ್ನೂ ಯಾಚಿಸದೆ ಒಂದು ತಿಂಗಳು ಪೂರ್ತಿಯಾಗಿ ಯದೃಚ್ಛಾಲಾಭ ಸಂತೃಪ್ತನಾಗಿರುವುದರಿಂದ ಭಗವಂತನು ವಿಶೇಷವಾಗಿ ಪ್ರೀತನಾಗುವನು.

೫. ಧಾರಣ ಪಾರಣ : ಒಂದು ದಿನ ಉಪವಾಸ (ಧಾರಣ). ಮರುದಿನ ಪಾರಣೆ. ಹೀಗೆ ಹದಿನೈದು ದಿವಸ ಉಪವಾಸ, ಹದಿನೈದು ದಿನ ಪಾರಣೆಯಿಂದ ಭಗವಂತನಿಗೆ ವಿಶೇಷವಾಗಿ ಪ್ರೀತಿಯುಂಟಾಗುವುದು.

ಈ ಪಂಚವ್ರತಗಳಲ್ಲದೆ ಕೆಲವು ಅಧಿಕವಾದ ಕರ್ಮಗಳು ಉಕ್ತವಾಗಿದೆ.

**ಮಾಸಸ್ನಾನ** : ಈ ಮಾಸ ಪೂರ್ತಿಯಾಗಿ ಮಾಸ ನಿಯಾಮಕನ ಪ್ರೀತಿಗಾಗಿ ಅರುಣೋದಯ ಕಾಲದಲ್ಲೇ ಗಂಗಾದಿ ಮಹಾನದಿಗಳಲ್ಲಿ, ತೀರ್ಥಗಳಲ್ಲಿ ಶ್ರೀರಾಯರ ಸನ್ನಿಧಾನದಲ್ಲಿ ತುಂಗಾಭದ್ರಾ ಸ್ನಾನ (ಮಧ್ವಸರೋವರ, ನೃಸಿಂಹತೀರ್ಥ ಇತ್ಯಾದಿ) ಬಾವಿ ತಟಾಕಗಳಲ್ಲಾಗಲೀ ಸ್ನಾನ ಮಾಡಬೇಕು.

**ಶ್ರೀಮದ್ಭಾಗವತ ಶ್ರವಣ :**

**ಶ್ರೀಮದ್ಭಾಗವತಂ ಭಕ್ತ್ಯಾಶ್ರೋತವ್ಯ ಪುರುಷೋತ್ತಮೇ ।**
**ತತ್ಪುಣ್ಯಂ ವಚಸಾ ವಕ್ತುಂ ವಿಧಾತಾಪಿ ನ ಶಕ್ನುಯಾತ್ ॥**

ಭಕ್ತಿಯಿಂದ ಶ್ರೀಮದ್ಭಾಗವತವನ್ನು ಶ್ರವಣ ಮಾಡಿದರೆ ಅದರ ಫಲವನ್ನೂ ಚತುರ್ಮುಖನಿಗೂ ವರ್ಣಿಸಲು ಸಾಧ್ಯವಿಲ್ಲ.

**ಲಕ್ಷ ತುಲಸೀ ಅರ್ಚನೆ :**

**ತುಲಸೀದಲ ಲಕ್ಷೈ್ಯೇಣ ತಸ್ಯ ಪುಣ್ಯ ಮನಂತಕಮ್ ।**
**ಯಥೋಕ್ತ ವ್ರತಿನಂ ದೃಷ್ಟ್ವಾ ಮಾಸೇ ಪುರುಷೋತ್ತಮೇ ।**
**ಯಮದೂತಾಃ ಪಲಾಯಂತೇ ಸಿಂಹಂ ದೃಷ್ಟ್ವಾ ಯಥಾಗಜಾಃ ॥**

ಒಂದು ಲಕ್ಷ ತುಲಸೀದಳದಿಂದ ಅರ್ಚನೆ ಮಾಡಿದರೆ ಯಮದೂತರು ಸಿಂಹವನ್ನು ಕಂಡ ಆನೆಯಂತೆ ಓಡಿಹೋಗುವರು. ಅರ್ಚನೆ ೫೬೪ ಬ್ರಹ್ಮಸೂತ್ರಗಳಿಂದಲೂ, ವಿಷ್ಣುಸಹಸ್ರನಾಮಗಳಿಂದಲೂ ಮಾಡಬೇಕು.



## ಅಧಿಕಮಾಸದಲ್ಲಿ ಮಾಡಬೇಕಾದ ಇತರೆ ದಾನಗಳು

ಈ ಮಾಸದಲ್ಲಿ ದಾನ ಕೊಡತಕ್ಕ ವಸ್ತುಗಳ ಸಂಖ್ಯಾ ಮೂವತ್ತಮೂರು.

**ಅಧಿಮಾಸೇ ತು ಸಂಪ್ರಾಪ್ತೇ ತ್ರಯಸ್ತ್ರಿಂಶತ್ತು ದೇವತಾಃ ।**
**ಉದ್ಧಿಶ್ಯಾಪೂಪದಾನೇನ ಪೃಥ್ವೀದಾನ ಫಲಂ ಲಭೇತ್ ॥**

**ಮುವ್ವತ್ತಮೂರು ದೇವತೆಗಳು** : ಏಕಾದಶರುದ್ರರು, ದ್ವಾದಶಾದಿತ್ಯರು, ಅಷ್ಟವಸುಗಳು, ಪ್ರಜಾಪತಿ ಹಾಗೂ ವಷಟ್‌ಕಾರ ಈ ದೇವತೆಗಳು ಅಧಿಕಮಾಸದ ಮುವ್ವತ್ತಮೂರು ದೇವತೆಗಳಾಗಿರುವರು. ಇವರ ಅಂತರ್ಯಾಮಿ ಭಗವಂತನಿಂದ ಅಭಿನ್ನನಾದ ಪುರುಷೋತ್ತಮನೇ ನಿಯಾಮಕ. ಅಧಿಮಾಸದ ಸಮಸ್ತ ಕಾರ್ಯಗಳೂ ಈ ಪುರುಷೋತ್ತಮನಿಗೆ ಪ್ರೀತ್ಯಾದಾಯಕವಾಗಿದೆ.

**ತಾಂಬೂಲದಾನ** : ಅಧಿಕಮಾಸಪೂರ್ತಿಯಾಗಿ ಬ್ರಾಹ್ಮಣ ದಂಪತಿಯರಿಗೆ ತಾಂಬೂಲವನ್ನು ದಾನಮಾಡಿದರೆ ದೌರ್ಭಾಗ್ಯವು ಪರಿಹಾರವಾಗಿ ವಿಶೇಷ ಸೌಭಾಗ್ಯವು ಲಭಿಸುವುದು.

ದಾನಮಂತ್ರ -
**ತಾಂಬೂಲಂ ಸುಖದಂ ಲೋಕೇ ಸರ್ವದಾ ಮಂಗಳಪ್ರದಂ ।**
**ಪ್ರಿಯಂ ಚೈವ ಹಿ ದೇವಾನಾಂ ಅತಶ್ಶಾಂತಿಂ ಪ್ರಯಚ್ಛಮೇ ॥**

**ದೀಪದಾನ** : ಪುರುಷೋತ್ತಮನ ಪ್ರೀತಿಗಾಗಿ ದೇವರ ಮುಂದೆ 'ಅಖಂಡ ದೀಪ'ವನ್ನು ಪ್ರಜ್ವಲಿಸಬೇಕು. ಈ ದೀಪವು ಒಂದು ತಿಂಗಳು ಪೂರ್ತಿಯಾಗಿ ಹಗಲು-ರಾತ್ರಿಯಲ್ಲಿ ಉರಿಯುತ್ತಿರಬೇಕು. ಆರದಂತೆ ಎಚ್ಚರವಹಿಸಬೇಕು. ಈದೀಪವನ್ನು ಬೆಳಗುವುದರಿಂದ ದಾರಿದ್ರ್ಯವು ಹೋಗಿ ಸಂಪತ್ತನ್ನು ಪಡೆಯಬಹುದು.

**ಕರ್ತವ್ಯಂ ದೀಪದಾನಂ ಚ ಪುರುಷೋತ್ತಮ ತುಷ್ಟಯೇ ।**
**ತೇನ ತೇ ತೀವ್ರ ದಾರಿದ್ರ್ಯಂ ಸಮೂಲಂ ನಾಶಮೇಷ್ಯತಿ ॥**

ತುಪ್ಪದ ದೀಪ ಅಥವಾ ಎಳ್ಳೆಣ್ಣೆ ದೀಪ ಹಚ್ಚಿ ಬ್ರಾಹ್ಮಣನಿಗೆ ದಾನ ಮಾಡಬೇಕು.

**ತಿಲತೈಲೇನ ಕರ್ತವ್ಯಃ ಸರ್ಪಿಷಾ ವೈಭವೇಸತಿ ।**

ದಾನಮಂತ್ರ -
**ದೀಪೋ ಜ್ಞಾನಪ್ರದೋ ನಿತ್ಯಂ ದೇವತಾನಾಂ ಪ್ರಿಯಸ್ಸದಾ ।**
**ದಾನೇನಾಽಸ್ಯ ಭವೇತ್ಸೌಖಂ ಶಾಂತಿರ್ಮೇ ವಾಂಚಿತಂ ಫಲಂ ॥**

## ಅಧಿಕಮಾಸದಲ್ಲಿ ನಿಷಿದ್ಧ ಕರ್ಮಗಳು

ಆ ಅಧಿಕಮಾಸದ ಹಿಂದಿನ ಚಾಂದ್ರಮಾಸದ ಹೆಸರಿಗಿಂತ ಅನಂತರದಲ್ಲಿ ಬರುವ ಚಾಂದ್ರಮಾಸದ ಹೆಸರೇ ಆ ಅಧಿಕಮಾಸಕ್ಕೆ ಹೆಸರಾಗಿರುವುದು. **ಅನನ್ಯಗತಿಕ** ಅಂದರೆ ಅವಶ್ಯವಾಗಿ ಆ ಮಾಸದಲ್ಲಿಯೇ ಮಾಡಬೇಕಾದ ಕರ್ಮಗಳು ಮತ್ತು **ಸಗತಿಕ** ಅಂದರೆ ಆ ಮಾಸದಲ್ಲಿಯೇ ಮಾಡಬೇಕಾದ ಅವಶ್ಯಕತೆ ಇಲ್ಲದಿರುವ ಕರ್ಮಗಳು ಎಂದು ಕರ್ಮಗಳು ಎರಡು ವಿಧವಾಗಿರುತ್ತವೆ. ಇವುಗಳಲ್ಲಿ ಅನನ್ಯಗತಿಕವಾದ ಸಂಧ್ಯಾವಂದನೆ ಅಗ್ನಿಹೋತ್ರ ಮುಂತಾದ ನಿತ್ಯಕರ್ಮಗಳನ್ನೂ ಮಳೆಗಾಗಿ ಮಾಡುವ ಕಾರೀರಿ ಮುಂತಾದ ನೈಮಿತ್ತಿಕ ಕರ್ಮಗಳನ್ನೂ ರಾಕ್ಷಸಪೀಡಿತ ಜನರ ರಕ್ಷಣೆಗಾಗಿ ಮಾಡುವ ರಕ್ಷೋಘ್ನೇಷ್ಟಿ ಮುಂತಾದ ಕಾಮ್ಯಕರ್ಮಗಳನ್ನೂ ಅಧಿಕಮಾಸದಲ್ಲಿಯೇ ಮಾಡಬೇಕು.

ಗ್ರಹಣ ನಿಮಿತ್ತ ದಾನಾದಿಗಳು, ಗ್ರಹಣನಿಮಿತ್ತ ಸ್ನಾನ, ದಾನ, ಜಪಾದಿಗಳನ್ನು ಅಧಿಕದಲ್ಲಿಯೇ ಮಾಡಬೇಕು.

**ನೈಮಿತ್ತಿಕ ಕಾರ್ಯಗಳಿಗೆ ನಿಷೇಧವಿಲ್ಲ** : ಭಾದ್ರಪದ ಮಾಸವು ಅಧಿಕಮಾಸವಾದರೇ ಭಾದ್ರಪದ ಕೃಷ್ಣಪಕ್ಷವು ಅಪರಪಕ್ಷ ಎಂದರೆ 'ಮಹಾಲಯ'ವಾದ್ದರಿಂದ ಮಹಾಲಯದ ಹದಿನಾರು ದಿವಸಗಳು ಯಾಗಕ್ಕೆ ಸಮಾನಗಳಾಗಿವೆಯಾದ್ದರಿಂದ ಮಹಾಲಯದಲ್ಲಿ ಕೊಡುವ ತರ್ಪಣ, ಶ್ರಾದ್ಧಾದಿಗಳು ಅಕ್ಷಯವಾಗುತ್ತವೆ ಎಂದಿದೆ. ಆದ್ದರಿಂದ ಮಹಾಲಯಶ್ರಾದ್ಧವನ್ನು ಎರಡು ಮಾಸದಲ್ಲಿಯೂ ನೈಮಿತ್ತಿಕವಾದ್ದರಿಂದ ಎರಡು ಬಾರಿ ಮಾಡಲೇಬೇಕು.

**ಮುಕ್ತ್ವಾ ನೈಮಿತ್ತಿಕಂ ಕರ್ಮ ।**

**ಚಾತುರ್ಮಾಸ್ಯ** : ಚಾತುರ್ಮಾಸ್ಯ ಕಾಲದಲ್ಲಿ ಯಾವುದಾದರೂ ಒಂದು ತಿಂಗಳು ಅಧಿಕಮಾಸವಾದರೆ ಆ ತಿಂಗಳಿನಲ್ಲಿ ಅದನ್ನು ಅಧಿಕ ಹಾಗೂ ನಿಜಮಾಸವೆರಡರಲ್ಲೂ ಆ ವ್ರತವನ್ನು ಆಚರಿಸಲೇಬೇಕು. ಶಾಕವ್ರತದಲ್ಲಿ ಅಧಿಕಮಾಸ ಬಂದಾಗ ಎರಡು ತಿಂಗಳೂ ಶಾಕವ್ರತವನ್ನು ಆಚರಿಸಬೇಕು.

**ಯತ್ತು ಶಾಕವ್ರತಾದಿಕಂ ತತ್ತು ಮಾಸದ್ವಯೇ ಕಾರ್ಯಂ ।**

ತೀವ್ರವಾದ ಜ್ವರಾದಿಗಳು ಬಂದಾಗ ಪರಿಹಾರಕ್ಕಾಗಿ ಮಾಡುವ ಶ್ರೀರುದ್ರಜಪಾರ್ಚನಾದಿಗಳನ್ನು ಅಧಿಕಮಾಸದಲ್ಲೇ ಆಚರಿಸಬೇಕು. ಸೀಮಂತಾದಿಗಳಿಗೆ ನಿಶ್ಚಿತ ತಿಂಗಳು ಅಧಿಕಮಾಸವಾಗಿದ್ದರೆ ಆ ಮಾಸದಲ್ಲೇ ಮಾಡಬೇಕು. ಪುಂಸವನವನ್ನೂ ಅಧಿಕಮಾಸದಲ್ಲೇ ಪ್ರಾಪ್ತವಾದರೆ ಅಲ್ಲಿಯೇ ಆಚರಿಸಬೇಕು.



**ರೋಗೇ ಚಾಲಭ್ಯಯೋಗೇ ಚ ಸೀಮಂತೇ ಪುಂಸವನೇಽಪಿ ಚ ।**
**ಯದ್ ದಾನಾದಿ ಸಮುದ್ದಿಷ್ಟಂ ಕುರ್ವನ್ನತ್ರ ನ ದುಷ್ಯತಿ ॥**

ಮಳೆಗಾಗಿ ಮಾಡಬಹುದಾದ ಕಾರೀರಿಯಾಗ ಸುಂದರಕಾಂಡ - ವಿರಾಟಪರ್ವ ಪಾರಾಯಣ, ಪ್ರವಚನಗಳನ್ನು ಅಧಿಕಮಾಸದಲ್ಲೇ ಮಾಡಬಹುದು.

ಕಾಮ್ಯಕರ್ಮಗಳನ್ನು ಅಧಿಕಮಾಸದಲ್ಲಿಯೂ ಮಾಡಬಹುದು ಮತ್ತು ಮುಗಿಸಲೂ ಬಹುದು. ಆ ಮಾಸದಲ್ಲಿ ಹೊಸದಾದ ಯಾವ ಕರ್ಮವನ್ನೂ ಆರಂಭಿಸಕೂಡದು. ದೇವಾಲಯದಲ್ಲಿ ಪೂಜಾಲೋಪಭಯದಿಂದ ಮಾಡಬೇಕಾದ ಪುನಃಪ್ರತಿಷ್ಠೆ, ಗರ್ಭಾದಾನಾದಿ ಅನ್ನಪ್ರಾಶನಾಂತ ನವಸಂಸ್ಕಾರಗಳು ಜ್ವರಾದಿರೋಗಪರಿಹಾರಾರ್ಥವಾಗಿ ಮಾಡುವ ಶಾಂತಿಗಳು ಅಲಭ್ಯಯೋಗದಲ್ಲಿ ಮಾಡಬೇಕಾದ ಶ್ರಾದ್ಧ ವ್ರತ ಮುಂತಾದವುಗಳು, ನಿಮಿತ್ತ ವಿಶೇಷದಿಂದ ಮಾಡಬೇಕಾದ ಪ್ರಾಯಶ್ಚಿತ್ತಗಳು, ನಿತ್ಯಶ್ರಾದ್ಧ, ಊನಮಾಸಿಕಾದಿ ಶ್ರಾದ್ಧಗಳು, ದರ್ಶಶ್ರಾದ್ಧ ಇವುಗಳನ್ನು ಅಧಿಕಮಾಸದಲ್ಲಿಯೇ ಮಾಡಬೇಕು.

ಅಧಿಕಮಾಸದಲ್ಲಿ ವಿವಾಹ - ಯಾತ್ರೋತ್ಸವ, ಯಜ್ಞ ಇವುಗಳನ್ನು ಮಾಡಬಾರದು.

**ನ ಕುರ್ಯಾದಧಿಕೇ ಮಾಸಿ ಕಾಮ್ಯಂ ಕರ್ಮ ಕದಾಚನ ।**
**ತದಧಿಮಾಸಃ ಕಥಿತಃ ವಿರಂಚಿನಾ ವಿವಾಹಯಾತ್ರೋತ್ಸವ ಯಜ್ಞ ನಾಶಕೃತ್ ॥**

**ಕಾಮ್ಯಕರ್ಮಗಳನ್ನು ಪ್ರಾರಂಭಿಸಬಾರದು** : ಅಧಿಕಮಾಸದಲ್ಲಿ ಕಾಮ್ಯಕರ್ಮಗಳನ್ನು ಹೊಸದಾಗಿ ಪ್ರಾರಂಭಿಸಬಾರದು. ಅಧಿಕಮಾಸವು ಪ್ರಾರಂಭವಾಗುವ ಮುಂಚೆಯೇ ಯಾವುದಾದರೂ ಕರ್ಮವನ್ನು ಪ್ರಾರಂಭಿಸಿದ್ದರೆ ಅದರ ಸಮಾಪ್ತಿಯನ್ನು ಅಧಿಕಮಾಸದಲ್ಲಿ ಮಾಡಬಹುದು.

**ಪ್ರಾರಬ್ಧಂ ಕರ್ಮ ಯತ್ಕಿಂಚಿತ್ ತತ್ತು ಕಾರ್ಯಂ ಮಲ್ಲಿಮ್ಲುಚೇ ।**
**ಅಸುರ್ಯಾ ನಾಮ ಯೇ ಮಾಸಾ ನ ತೇಷು ಮಮ ಸಮ್ಮತಾಃ ।**
**ವ್ರತಾನಾಂ ಚೈವ ಯಜ್ಞಾನಾಂ ಪ್ರಾರಂಭಾಶ್ಚ ಸಮಾಪ್ತಯಃ ॥**

## ವರ್ಜ್ಯ ಸಂಗ್ರಹ

**ಅನಿತ್ಯಮನಿಮಿತ್ತಂ ತು ದಾನಂ ಚ ಮಹದಾದಿಕಂ । ಅಗ್ನ್ಯಾಧಾನಾದ್ವರಾಪೂರ್ವ ತೀರ್ಥಯಾತ್ರಾಮರೇಕ್ಷಣಂ । ದೇವಾರಾಮತಟಾಕಾದಿ ಪ್ರತಿಷ್ಠಾಂ ಮೌಂಜಿಬಂಧನಂ ।**

**ಆಶ್ರಮಸ್ವೀಕೃತಿಂ ಕಾಮ್ಯವೃಷೋತ್ಸರ್ಗಂ ಚ ನಿಷ್ಕ್ರಮಂ । ರಾಜ್ಯಾಭಿಷೇಕಂ ಪ್ರಥಮಂ ಚೂಡಾಕರ್ಮ ವ್ರತಾದಿತಂ । ಅನ್ನಪ್ರಾಶನಮಾರಂಭಂ ಗೃಹಾಣಾಂ ಚ ಪ್ರವೇಶನಂ । ಸ್ನಾನಂ ವಿವಾಹಂ ನಾಮಾತಿಪನ್ನಂ ದೇಮಹೋತ್ಸವಂ । ವ್ರತಾರಂಭಂ ಸಮಾಪ್ತಿಂ ಚ ಕಾಮ್ಯಕರ್ಮ ಚ ಪಾಪ್ಮನಾಂ । ಪ್ರಾಯಶ್ಚಿತ್ತಂ ಚ ಸರ್ವಸ್ಯ ಮಲಮಾಸೇ ವಿವರ್ಜಯೇತ್ ।**

ಅಗ್ನ್ಯಾಧೇಯ, ದೇವತಾಪ್ರತಿಷ್ಠೆ, ಯಜ್ಞ, ವ್ರತಗಳು, ಉಪಾಕರ್ಮ, ವೃಷೋತ್ಸರ್ಗ, ಚೂಡಾಕರ್ಮ (ಚೌಲ), ವಿವಾಹ, ನೂತನ ಸನ್ಯಾಸಿಗಳ ಪಟ್ಟಾಭಿಷೇಕ, ಇವುಗಳನ್ನು ಅಧಿಕದಲ್ಲಿ ಮಾಡಬಾರದು. ಆದರೆ ಪ್ರತಿಮಾಸಂಸ್ಕಾರವು ನಾಶವಾದಾಗ ಪುನಃಪ್ರತಿಷ್ಠಾಪನೆಯು ಅಧಿಕದಲ್ಲಿಯೂ ಮಾಡಬಹುದು. ಮಹಾದಾನಗಳನ್ನು ಅಧಿಕದಲ್ಲಿ ಮಾಡಬಾರದು. ತುಲಾಪುರುಷದಾನ, ಹಿರಣ್ಯಗರ್ಭದಾನ, ಬ್ರಹ್ಮಾಂಡದಾನ, ಕಲ್ಪಪಾದಪದಾ, ಗೋಸಹಸ್ರದಾನ ಮುಂತಾದ ಹದಿನಾರುದಾನಗಳನ್ನು ಅಧಿಕದಲ್ಲಿ ಮಾಡಬಾರದು.

**ಬಂಗಾರವನ್ನು ಧರಿಸಬಾರದು** : ಹೊಸಮನೆಯನ್ನು ಕಟ್ಟಿಸಿ ಅಧಿಕಮಾಸದಲ್ಲಿ ವಾಸ್ತುದೇವತಾ ಪೂಜೆ, ಗೃಹಪ್ರವೇಶವನ್ನು ಮಾಡಬಾರದು.

## ಅಧಿಕ, ನಿಜ ಎರಡರಲ್ಲೂ ಮಾಡಲೇಬೇಕಾದದ್ದು

ಪುಂಸವನ, ಬಡ್ಡಿ ವ್ಯವಹಾರ, ಸೀಮಂತ, ಮಾಸಿಕ ಶ್ರಾದ್ಧ, ಸಂಪಿಡೀಕರಣ, ನಿತ್ಯ ಸಂಧ್ಯಾವಂದನ, ಜಾತಕರ್ಮ, ವೈಶ್ವದೇವಾದಿ ಕಾರ್ಯಗಳಲ್ಲಿ ಅಧಿಕಮಾಸವನ್ನು ಬಿಡಬಾರದು. ಎಂದರೆ ಅಧಿಕಮಾಸ - ನಿಜಮಾಸ ಇವೆರಡರಲ್ಲೂ ಈ ಮೇಲಿನ ಕಾರ್ಯವನ್ನು ಬಿಡಬಾರದು.

**ಗರ್ಭೇ ವಾರ್ಧುಷಿಕೇ ಭೃತ್ಯೇ ಶ್ರಾದ್ಧಕರ್ಮಣಿ ಮಾಸಿಕೇ ।**
**ಸಂಪಿಡೀಕರಣೇ ನಿತ್ಯೇ ನಾಧಿಮಾಸಂ ವಿವರ್ಜಯೇತ್ ॥**

## ತೀರ್ಥಯಾತ್ರೆ

ವಸ್ತುತಃ ಅಧಿಕಮಾಸದಲ್ಲಿ ತೀರ್ಥಯಾತ್ರೆಯನ್ನು ಮಾಡಬಾರದು ಎಂದು ನಿಷೇಧವನ್ನು ಮಾಡಿರುವರು. ಆದರೆ ಈ ನಿಷೇಧವಾದರೂ ಪ್ರಪ್ರಥಮವಾಗಿ ತೀರ್ಥಯಾತ್ರೆಯನ್ನು ಮಾಡುವವರಿಗೆ ಮಾತ್ರ, ಈ ಮೊದಲೇ ತೀರ್ಥಕ್ಷೇತ್ರ, ದರ್ಶನ, ಶ್ರಾದ್ಧಾದಿಗಳನ್ನು ಮಾಡಿ ಎರಡನೇ ಬಾರಿ ತೀರ್ಥಯಾತ್ರೆಯನ್ನು ಕೈಗೊಂಡಿರುವವರಿಗೆ ನಿಷೇಧವಿಲ್ಲ. ಅವರು ತೀರ್ಥಯಾತ್ರೆಯನ್ನು ಮಾಡಬಹುದು.



**ನ ಯಾತ್ರಾಂ ನ ವಿವಾಹಂ ಚ ನ ಚ ವಾಸ್ತುನಿವೇಶನಂ ।**
**ನ ಪ್ರತಿಷ್ಠಾ ಚ ದೇವಾನಾಂ ಪ್ರಾಸಾದ ಗ್ರಾಮ ಭೂರುಹಾಂ ॥**

ಈ ಶ್ಲೋಕಕ್ಕೆ ಸ್ಮೃತಿ ಕೌಸ್ತುಭ (೫೨೭ ಪುಟ)ದಲ್ಲಿ ಹೀಗೆ ವ್ಯಾಖ್ಯಾನಿಸಲಾಗಿದೆ.

**ನ ಯಾತ್ರಾಂ ಇತಿ ಪ್ರಥಮಯಾತ್ರಾಯಾಃ ನಿಷೇಧೇನ ಯಾತ್ರೋದ್ದೇಶ್ಯ ಸ್ನಾನ ಪಿಂಡದಾನಾದೇಃ ಸುತರಾಂ ನಿಷೇಧ ಇತಿ ।**
**ಮಲಮಾಸೇಽಪಿ ಅನಾವೃತ್ತತೀರ್ಥಯಾತ್ರಾಂ ಪರಿತ್ಯಜೇತ್ ॥**

ಅನಾವೃತ್ತತೀರ್ಥಯಾತ್ರೆ ಎಂದರೆ ಆವೃತ್ತಿಯಾಗದಿರುವ ತೀರ್ಥಯಾತ್ರೆ ಎಂದರ್ಥ ಮೊದಲನೆಯ ಬಾರಿಗೆ ಮಾಡುವ ಯಾತ್ರೆ. ಅಧಿಕಮಾಸದಲ್ಲೇ ಮೃತರಾದರೆ ಅವರನ್ನು ಉದ್ದೇಶಿಸಿ ಮಾಡುವ ಹನ್ನೆರಡು ದಿವಸದ ಕರ್ಮಗಳನ್ನು ಅಧಿಕಮಾಸದಲ್ಲಿಯೇ ಮಾಡಬೇಕು. ಜನನವಾದರೆ ಜಾತಕರ್ಮ, ಜ್ವರಾದಿಗಳಿಗೆ ಶಾಂತಿ, ನಾಂದೀಶ್ರಾದ್ಧ, ಪ್ರಾಯಶ್ಚಿತ್ತಗಳು ಇವುಗಳನ್ನು ಅಧಿಕಮಾಸದಲ್ಲಿಯೇ ಮಾಡಬೇಕು.

## ಪ್ರತಿಸಾಂವತ್ಸರಿಕ ಶ್ರಾದ್ಧ ವಿಚಾರ

ಪ್ರತಿವರ್ಷವೂ ಮೃತನ ಹನ್ನೆರಡನೆಯ ತಿಂಗಳಿನಲ್ಲಿ ಮೃತವ್ಯಕ್ತಿಯನ್ನುದ್ದೇಶಿಸಿ ಸಾವಂತ್ಸರಿಕ ಶ್ರಾದ್ಧವನ್ನು ಮಾಡಬೇಕು. ಆದರೆ ಅಧಿಕಮಾಸವು ಬಂದಾಗ ಹನ್ನೆರಡರ ಬದಲಾಗಿ ಹದಿಮೂರನೇ ತಿಂಗಳಿನಲ್ಲಿ ಸಾವಂತ್ಸರಿಕ ಶ್ರಾದ್ಧವು ಮಾಡಬೇಕಾಗುತ್ತದೆ.

**ಪ್ರತ್ಯಬ್ಧಂ ದ್ವಾದಶೇ ವರ್ಷೆ ಕಾರ್ಯಾ ಪಿಂಡಕ್ರಿಯಾ ದ್ವಿಜೈಃ ।**
**ಕ್ವಚಿತ್ ತ್ರಯೋದಶೇಽಪಿ ಸ್ಯಾದ್ ಆದ್ಯಂ ಮುಕ್ತ್ವಾ ತು ವತ್ಸರಂ ॥**

ಬೇರೆ ಮಾಸದಲ್ಲಿ ಮೃತನಾದ ವ್ಯಕ್ತಿಯ ಪ್ರಥಮ ಸಾಂವತ್ಸರಿಕ ಶ್ರಾದ್ಧವು ಅಧಿಕಮಾಸದಲ್ಲಿ ಬಂದರೆ ಅಧಿಕಮಾಸದಲ್ಲೇ ಪ್ರಥಮ ಸಾಂವತ್ಸರಿಕ ಶ್ರಾದ್ಧವನ್ನು ಮಾಡಬೇಕು. ಏಕೆಂದರೆ ಶ್ರಾದ್ಧಕ್ಕೆ ಯಾವ ಮಾಸ, ಯಾವ ಪಕ್ಷ, ಯಾವ ತಿಥಿಯಿರುವಾಗ ಮೃತನಾಗಿರುವನೋ ಪ್ರತಿವರ್ಷದಲ್ಲಿಯೂ ಅದೇ ಮಾಸ, ಅದೇ ಪಕ್ಷ, ಅದೇ ತಿಥಿಯಲ್ಲಿಯೇ ಮೃತಾಹಶ್ರಾದ್ಧವನ್ನು ಮಾಡಬೇಕೆಂದಿದೆ.

**ಆಬ್ಧಿಕಂ ಪ್ರಥಮಂ ಯತ್ ಸ್ಯಾತ್ ತತ್ ಕುರ್ವೀತ ಮಲಿಂಮ್ಲುಚೇ ।**

ಹಿಂದೆ ಅಧಿಕಮಾಸದಲ್ಲಿ ಮೃತಿ ಹೊಂದಿದವರ ಪ್ರತಿಸಾವಂತ್ಸರಿಕ ಶ್ರಾದ್ಧವನ್ನು ಅದೇ ಮಾಸವು ಪುನಃ ಅಧಿಕಮಾಸವಾಗಿ ಬಂದಾಗ ಆ ಅಧಿಕಮಾಸದಲ್ಲಿಯೇ ಮಾಡಬೇಕು. ಹಿಂದೆ ಶುದ್ಧಮಾಸದಲ್ಲಿ ಮೃತಿ ಹೊಂದಿದವರಿಗೆ ಅದೇ ಮಾಸವೇ

ಅಧಿಕಮಾಸವಾಗಿ ಬಂದಾಗ ಪ್ರತಿಸಾಂವತ್ಸರಿಕ ಶ್ರಾದ್ಧವನ್ನು ಅಧಿಕಮಾಸದಲ್ಲಿ ಸಂಕಲ್ಪ ಮಾತ್ರ. ಶುದ್ಧಮಾಸದಲ್ಲಿಯೇ ಪಿಂಡಸಹಿತ ಮಾಡಬೇಕು. ಪಿಂಡವರ್ಜಂ ತ್ವ ಸಂಕ್ರಾಂತೇ ಸಂಕ್ರಾಂತಾ ಪಿಂಡಸಂಯುತಂ. ಆದರೆ ಪ್ರಥಮಾಬ್ದಿಕವನ್ನು ಮಾತ್ರ ಅಧಿಕಮಾಸದಲ್ಲಿಯೇ ಮಾಡಬೇಕು. ಮರಣ ಹೊಂದಿದವರ ಹನ್ನೊಂದು ದಿನಗಳ ಕರ್ಮ ಮತ್ತು ಸಂಪಿಡೀಕರಣಗಳು ಅಧಿಮಾಸದಲ್ಲಿ ಬಂದರೆ ಅವುಗಳನ್ನು ಅಧಿಕಮಾಸದಲ್ಲಿಯೇ ಮಾಡಬೇಕು. ಎರಡನೆಯ ತಿಂಗಳಿನ ಮಾಸಿಕದಿಂದ ಹನ್ನೆರಡನೆಯ ತಿಂಗಳಿನ ಮಾಸಿಕದವರೆಗೆ ಮಧ್ಯದಲ್ಲಿ ಅಧಿಕಮಾಸ ಬಂದರೆ ಆ ತಿಂಗಳಿನ ಮಾಸಿಕವನ್ನು ಅಧಿಕಮಾಸದಲ್ಲಿಯೂ ಶುದ್ಧಮಾಸದಲ್ಲಿಯೂ ಎರಡು ಸಲ ಮಾಡಬೇಕು. ಹನ್ನೆರಡನೇ ತಿಂಗಳು ಅಧಿಕಮಾಸವಾಗಿ ಬಂದರೆ ಆ ತಿಂಗಳಿನ ಮಾಸಿಕವನ್ನು ಹನ್ನೆಡರನೇ ತಿಂಗಳಾದ ಅಧಿಕಮಾಸದಲ್ಲಿಯೂ ಹದಿಮೂರನೇ ತಿಂಗಳಾದ ಶುದ್ಧಮಾಸದಲ್ಲಿಯೂ ಮಾಡಿ ಹದಿನಾಲ್ಕನೇ ತಿಂಗಳಾದ ಮರಣಮಾಸದಲ್ಲಿ ಪ್ರಥಮಾಬ್ದಿಕವನ್ನು ಮಾಡಬೇಕು.

ನಿಮಿತ್ತಗಳು ಅಧಿಕ ಹಾಗೂ ನಿಜಮಾಗಳೆರಡರಲ್ಲಿಯೂ ಬಂದದ್ದಾದರೆ ಎರಡೂ ತಿಂಗಳಿನಲ್ಲೂ ಮಾಡಬೇಕು. ಮೃತತಿಥಿಗಳು ಎರಡು ತಿಂಗಳಲ್ಲಿ ಬರುವುದರಿಂದ ಎರಡರಲ್ಲಿಯೂ ಕರ್ಮವು ವಿಹಿತವಾಗಿದೆ. ಪ್ರತಿಸಾಂವತ್ಸರಿಕ ಶ್ರಾದ್ಧ, ಉದಕುಂಭ ಶ್ರಾದ್ಧ, ಮನ್ವಾದಿ, ಮಹಾಲಯ, ಯುಗಾದಿಗಳಲ್ಲಿ ಮಾಡಬೇಕಾದ ಶ್ರಾದ್ಧಗಳು, ಅಧಿಕವಲ್ಲದ ಶುದ್ಧಮಾಸದಲ್ಲಿ ಮೃತರಾದವರಿಗೆ ಮಾಡಬೇಕಾದ ಆಬ್ದಿಕಶ್ರಾದ್ಧ ಇವುಗಳನ್ನು, ನಿತ್ಯತರ್ಪಣ, ಅಮಾವಾಸ್ಯಾ ಪ್ರಯುಕ್ತ ಶ್ರಾದ್ಧವನ್ನು ಉಭಯಮಾಸದಲ್ಲೂ ಮಾಡಲೇಬೇಕು.

## ಕ್ಷಯಮಾಸ

ಮಲಮಾಸವು ಎರಡು ವಿಧ - ಅಧಿಕಮಾಸ ಹಾಗೂ ಕ್ಷಯಮಾಸ ಎಂದು. ಅಧಿಕಮಾಸದಲ್ಲಿ ವರ್ಷಕ್ಕೆ ಹದಿಮೂರು ತಿಂಗಳುಗಳಾದರೇ ಕ್ಷಯಮಾಸದಲ್ಲಿ ಹನ್ನೊಂದೇ ತಿಂಗಳುಗಳು ಇರುತ್ತವೆ. ಕ್ಷಯಮಾಸವು ಶೂನ್ಯಮಾಸವಾಗಿರುತ್ತದೆ. ಚಾಂದ್ರಮಾನ ಮಾಸದಲ್ಲಿ ಶುದ್ಧವಾದ ಎರಡು ಸೂರ್ಯಸಂಕ್ರಮಣಗಳು ಬಂದರೆ ಅದನ್ನು ಶೂನ್ಯಮಾಸ ಅಥವಾ ಕ್ಷಯಮಾಸವೆನ್ನುವರು.

**ದ್ವಿಸಂಕ್ರಾಂತಿಮಾಸಃ ಕ್ಷಯಾಖ್ಯಃ ಕದಾಚಿತ್ ।**

ಕ್ಷಯಮಾಸವು ೧೪೧ ವರ್ಷಕ್ಕೆ ಒಂದು ಬಾರಿ ಬರುತ್ತದೆ. ಪುನಃ ಹತ್ತೊಂಭತ್ತು ವರ್ಷಕ್ಕೆ ಬರುತ್ತದೆ. ಈ ಹಿಂದೆ ೧೮೮೩ ರಂದು ಕ್ಷಯಮಾಸವು ಬಂದಿತ್ತು. ಮುಂದೆ



೧೮೮೩ + ೧೪೧ = ೨೧೨೪ ರಂದು ಕ್ಷಯಮಾಸವು ಬರಲಿದೆ. ಕ್ಷಯಮಾಸವು ಕಾರ್ತಿಕಮಾಸ, ಮಾರ್ಗಶಿರ, ಪುಷ್ಯ ಮೂರು ಮಾಸಗಳಲ್ಲಿಯೇ ಬರುತ್ತದೆ.

**ಕ್ಷಯಃ ಕಾರ್ತಿಕಾದಿತ್ರಯೇಸ್ಯಾತ್ ।**

ಯಾವ ವರ್ಷದಲ್ಲಿ ಕ್ಷಯಮಾಸ ಬರುವುದೋ ಆ ವರ್ಷ ಎರಡು ಅಧಿಕಮಾಸಗಳು ಇರುತ್ತವೆ. ಕ್ಷಯಮಾಸಕ್ಕೆ ಹಿಂದೆ ಒಂದು, ಮುಂದೆ ಒಂದು ಅಧಿಕಮಾಸವಿರುತ್ತದೆ.

ಮೊದಲನೆ ಅಧಿಕಮಾಸಕ್ಕೆ ಪ್ರಾಕೃತ (ಸಂಸರ್ಪ)ವೆಂದು, ಎರಡನೆ ಮಾಸಕ್ಕೆ ಮಲಿಮ್ಲುಚ (ಅಂಹಸ್ಪತಿ)ವೆಂದು ಸರ್ವಕರ್ಮ ಬಹಿಷ್ಕೃತವಾಗಿದೆ. ಪ್ರಾಕೃತ ಮಾಸ ಎಲ್ಲಾ ಕರ್ಮಗಳೂ ಗ್ರಾಹ್ಯ. ಕ್ಷಯಮಾಸದ ತಿಥಿಯ ಪೂರ್ವಾರ್ಧ ಪೂರ್ವಮಾಸವೆಂತಲೂ, ತಿಥಿಯ ಎರಡನೆಯ ಅರ್ಧ ಮುಂದಿನ ಮಾಸವೆಂತಲೂ ಕರ್ಮಾಚರಣೆ ಮಾಡಬೇಕು.

**ತಿಥ್ಯರ್ಧೇ ಪ್ರಥಮೇ ಪೂರ್ವೋ ದ್ವಿತೀಯೇರ್ಧೇ ತದುತ್ತರಃ ।**
**ಮಾಸಾವಿತಿ ಬುಧೈಃ ಚಿಂತ್ಯಾ ಕ್ಷಯಮಾಸಸ್ಯ ಮಧ್ಯಗೌ ॥**

**ಕ್ಷಯಮಾಸದ ಉದಾಹರಣೆ** : ಭಾದ್ರಪದ ಬಹುಳ ಅಮಾವಾಸ್ಯೆಯಲ್ಲಿ ಕನ್ಯಾಸಂಕ್ರಾಂತಿ, ನಂತರ ಆಶ್ವಯುಜಮಾಸವು ಅಧಿಕಮಾಸವಾಗುವುದು. ಪುನಃ ನಿಜ ಆಶ್ವಯುಜದ ಪಾಡ್ಯದ ದಿನ ತುಲಾಸಂಕ್ರಾಂತಿಯಾಗಿ ಕಾರ್ತಿಕ ಶುದ್ಧ ಪಾಡ್ಯ ದಿನ ವೃಶ್ಚಿಕ ಸಂಕ್ರಾಂತಿ. ಅನಂತರ ಮಾಗಶೀರ್ಷ ಶುದ್ಧ ಪಾಡ್ಯದಲ್ಲಿ ಧನುಃಸಂಕ್ರಾಂತಿಯಾಗುವುದು. ಅದೇ ಮಾಸದಲ್ಲಿ ಅಮಾವಾಸ್ಯೆ ದಿನ ಮಕರ ಸಂಕ್ರಾಂತಿಯಾಗುವುದು. ಹೀಗೆ ಧನುಃ ಸಂಕ್ರಾಂತಿ, ಮಕರ ಸಂಕ್ರಾಂತಿಗಳೆರಡೂ ಈ ಒಂದು ಮಾಸಕ್ಕೆ ಕ್ಷಯಮಾಸವೆಂದು ಹೇಳುವುದು. ಇದು ಮಾರ್ಗಶೀರ್ಷ ಪುಷ್ಯಮಾಸ ಎರಡೂ ಸೇರಿದ ಒಂದು ಮಾಸವಾಗುವುದು. ಅದರ ಪ್ರತಿಪದಾದಿ ತಿಥಿಗಳು ಪೂರ್ವಾರ್ಧದಲ್ಲಿ ಮಾರ್ಗಶೀರ್ಷ ಉತ್ತರಾರ್ಧದಲ್ಲಿ ಪುಷ್ಯಮಾಸವೆಂದು ತಿಳಿದರೆ ಎರಡು ಮಾಸಗಳೂ ಒಂದರಲ್ಲಿ ಸೇರುವುವು.

ಇದರಲ್ಲಿ ತಿಥಿಯ ಪೂರ್ವಾರ್ಧದಲ್ಲಿ ಮೃತಪಟ್ಟವನಿಗೆ ಮಾರ್ಗಶೀರ್ಷ ಮಾಸದಲ್ಲೂ ಉತ್ತರಾರ್ಧದಲ್ಲಿ ಮೃತಪಟ್ಟವನಿಗೆ ಪುಷ್ಯಮಾಸದಲ್ಲೂ ಪ್ರತಿಸಾಂವತ್ಸರಿಕ ಶ್ರಾದ್ಧವನ್ನು ಮಾಡಬೇಕು. ಇದರಂತೆಯೇ ಜನನವಾದರೂ ವರ್ಧಾಪನಾದಿ ವಿಧಿಯನ್ನು ಅಂದರೆ ಹುಟ್ಟಿದ ಹಬ್ಬದ ಆಯುಷ್ಯ ಹೋಮಾದಿಗಳನ್ನು ಆಚರಿಸಬೇಕು. ಹಿಂದೆ

ಕೊಟ್ಟ ಉದಾಹರಣೆಯಲ್ಲಿ ಮಾಘಮಾಸದ ಅಮಾವಾಸ್ಯೆಯಲ್ಲಿ ಕುಂಭಸಂಕ್ರಾಂತಿಯಾಗಿ ಅದರಿಂದ ಫಾಲ್ಗುಣಮಾಸ ಅಧಿಕಮಾಸವಾಗುವುದು. ನಿಜಫಾಲ್ಗುಣಮಾಸದ ಶುದ್ಧ ಪ್ರತಿಪತ್ತಿನಲ್ಲಿ ಮೀನ ಸಂಕ್ರಾಂತಿಯಾಗುವುದು. ಹೀಗೆ ಹಿಂದೆ ಮುಂದೆ ಎರಡು ಅಧಿಕಮಾಸಗಳಿಂದ ಕೂಡಿದ ಕ್ಷಯಮಾಸವು ಯಾವ ವರ್ಷ ಬರುವುದೋ ಆ ವರ್ಷ ೧೩ ಮಾಸಗಳು ೩೮೯ ದಿನಗಳು ಸುಮಾರಾಗಿ ಇರುತ್ತವೆ.

## ಬೃಹನ್ನಾರದೀಯ ಪುರಾಣೋಕ್ತ ಕಥಾಭಾಗ

ಲಕ್ಷ್ಮೀದೇವಿಯು ಭಗವಂತನನ್ನು ಹೀಗೆ ಪ್ರಾರ್ಥಿಸಿದಳು. ಭಗವಂತನೇ ಲೋಕಹಿತಕ್ಕಾಗಿ ನಾನು ಕೇಳುತ್ತಿರುವ ಈ ಪ್ರಶ್ನೆಗೆ ಉತ್ತರಿಸು.

ಈ ಲೋಕದಲ್ಲಿ ನಾವು ಏನು ದಾನಾದಿಗಳನ್ನು ಮಾಡುವೆವೋ ಅವುಗಳೇ ನಮಗೆ ಮುಂದೆ ಲಭಿಸುತ್ತದೆ. ದಾನವಿಹೀನನಾದವನ ಜನ್ಮವು ನಿರರ್ಥಕವೇ ಸರಿ. ಅಧಿಕಮಾಸವು ಪ್ರಾಪ್ತವಾದಾಗ ಕ್ಷೌರ, ಉಪನಯನ, ವಿವಾಹ, ವ್ರತಾಚರಣೆ, ಕಾಮ್ಯೋಪವಾಸ ಇವುಗಳನ್ನು ಮಾಡಬಾರದೆಂದು ತಿಳಿಸಲಾಗಿದೆ. ಅದರಿಂದ ಅಧಿಕಮಾಸವು ಬಂದಾಗ ಯಾವ ವ್ರತವನ್ನು ಮಾಡಬೇಕು. ಯಾವ ದಾನವನ್ನು ಮಾಡಬೇಕು.

**ಕ್ಷೌರಂ ಮೌಂಜೀ ವಿವಾಹಶ್ಚ ವ್ರತಂ ಕಾಮ್ಯೋಪವಾಸಕಂ ।**
**ಮಲಿಂಮ್ಲುಚೇ ಸದಾ ತ್ಯಾಜ್ಯಂ ಗೃಹಸ್ಥೇನ ವಿಶೇಷತಃ ॥**

ಭಗವಂತನು ಹೀಗೆಂದನು, ದೇವಿಯೇ ಅಧಿಮಾಸಕ್ಕೆ ಪುರುಷೋತ್ತಮ ನಾಮಕನಾದ ನಾನೇ ದೇವತೆಯಾಗಿರುವೆನು. ಈ ಕಾಲದಲ್ಲಿ ಅನುಷ್ಠಾನ ಮಾಡಿದ ಸ್ನಾನ, ಜಪ, ಹೋಮಾದಿಗಳು ಅಕ್ಷಯ್ಯವಾಗುತ್ತವೆ.

ಅಧಿಕಮಾಸದಲ್ಲಿ ಯಾವ ಪುಣ್ಯಕಾರ್ಯವನ್ನು ಮಾಡದೆ ಯಾರು ಕಾಲವನ್ನು ಕಳೆಯುವರೋ ಅವರಿಗೆ ದಾರಿದ್ರ್ಯ, ಪುತ್ರಶೋಕ, ಪಾಪಲೇಪಾದಿಗಳು ಉಂಟಾಗುವುವು.

**ಮಲಮಾಸೋ ಗತಃ ಶೂನ್ಯಃ ಯೇಷಾಂ ದೇವಿ ಪ್ರಮಾದತಃ ।**
**ದಾರಿದ್ರ್ಯಂ ಪುತ್ರಶೋಕಂ ಚ ಪಾಪಪಂಕವಿಗರ್ಹಿತಮ್ ॥**

ತಿಂಗಳು ಪೂರ್ತಿಯಾಗಿ ಧರ್ಮಾಚರಣೆಯನ್ನು ಮಾಡಲು ಅಶಕ್ಯರಾದವರು ಕೃಷ್ಣಪಕ್ಷದ ಅಷ್ಟಮೀ - ನವಮೀ - ಚತುರ್ದಶಿಯಿಂದಾದರೂ ಅಪೂಪದಾನಾದಿ



ಅಧಿಕಮಾಸೋಕ್ತಕರ್ಮಾನುಷ್ಠಾನವನ್ನು ಮಾಡಬೇಕು. ಅಧಿಕಮಾಸದಲ್ಲಿ ವ್ಯತೀಪಾತಯೋಗವಿರುವ ದಿನದಲ್ಲಿ, ದ್ವಾದಶಿಯಂದು, ಪೂರ್ಣಿಮೆ, ಚತುರ್ದಶಿ, ನವಮ್ಯಾದಿಗಳಲ್ಲಿ ಯಥಾಶಕ್ತಿ ಲಭ್ಯವಿರುವ ವಸ್ತುಗಳಿಂದಲೇ ಪೂಜೆಯನ್ನು ಮಾಡಬೇಕು.

ಸೂರ್ಯನಾರಾಯಣನ ಪ್ರೀತಿಗಾಗಿ ಮುವತ್ತಮೂರು ಅಪೂಪಗಳನ್ನು ತುಪ್ಪ ಸಹಿತವಾಗಿ ದಾನ ಮಾಡಬೇಕು. ಪೂರ್ವದಲ್ಲಿ ಕೌಶಿಕನೆಂಬ ವಿಪ್ರನಿದ್ದನು. ಮಹಾತಪಸ್ವಿಯೂ ಜಿತೇಂದ್ರಿಯನೂ ಆದ ಕೌಶಿಕನಿಗೆ ಮಹಾಕ್ರೂರಿಯಾದ, ಅಧಮನಾದ ಮೈತ್ರೇಯನೆಂಬ ಪುತ್ರನಿದ್ದನು. ಮದ್ಯಪಾನದಿಂದ ಮತ್ತನಾದ ಮೈತ್ರೇಯನು ಕಾಮಾಂಧನಾಗಿದ್ದನು.

ಒಂದು ದಿನದಲ್ಲಿ ಮೈತ್ರೇಯನು ಬೇಟೆಗಾಗಿ ಕಾಡಿಗೆ ಹೊರಟನು. ಸೌರಾಷ್ಟ್ರನಗರಕ್ಕೆ ಬಂದ ಆ ದುಷ್ಟನು ವಿಪ್ರನೊಬ್ಬನನ್ನು ಕೊಂದು ಹಾಕಿ ಅವನಲ್ಲಿರುವ ಅಪಾರ ಹಣವನ್ನು ಅಪಹರಿಸಿದನು. ಏನೂ ಅರಿಯದ ವಿಪ್ರನನ್ನು ಕೊಂದದ್ದಕ್ಕಾಗಿ ದೇಶದಲ್ಲಿ ಹಾಹಾಕಾರವುಂಟಾಯಿತು. ಆ ರಾಷ್ಟ್ರವೇ ಸುಟ್ಟು ಬೂದಿಯಾದಂತಾಯಿತು. ವಿಷವು ವಿಷವಲ್ಲ, ಬ್ರಾಹ್ಮಣರ ಸೊತ್ತೇ ವಿಷ. ಇಂತಹ ಬ್ರಹ್ಮಸ್ವ ಅಪಹರಣ, ಬ್ರಾಹ್ಮಣ ಪ್ರಾಣಹರಣ ಇವೆರಡನ್ನೂ ಮಾಡಿರುವ ಮೈತ್ರೇಯನು. ಮೃತನಾಗಿ ನರಕಕ್ಕೆ ಬಿದ್ದನು. ನರಕದಲ್ಲಿ ಯಮದೂತರು ನಾನಾ ವಿಧವಾಗಿ ಹಿಂಸಿಸಿ ಕೃಮಿಕುಂಡದಲ್ಲಿ ಎಸೆದರು.

**ಘೋರೇ ವೈ ಕೃಮಿಕುಂಡೇ ಚ ಮೈತ್ರೇಯಃ ಸ ನಿಪಾತಿತಃ ।**

ಹತ್ತು ಸಾವಿರ ವರ್ಷಗಳ ಕಾಲ ನರಕದಲ್ಲಿ ದುಃಖವನ್ನು ಅನುಭವಿಸಿದನು. ಈ ವಿಷಯವನ್ನು ನಾರದರ ಮೂಲಕ ತಂದೆ ಕೌಶಿಕನು ತಿಳಿದನು. ಪಾಪ ಪರಿಹಾರಕ್ಕಾಗಿ ಶೃತಿಶಾಸ್ತ್ರಗಳಲ್ಲಿ ಹುಡುಕಿ ಬ್ರಹ್ಮಹತ್ಯೆಗೆ ಪರಿಹಾರವನ್ನು ಅರಿತುಕೊಂಡನು.

ಪುತ್ರನ ಉದ್ಧಾರಕ್ಕಾಗಿ ಅಧಿಕಮಾಸದ ವ್ರತವನ್ನು ಕೈಗೊಂಡು ತನ್ನ ಪುತ್ರನನ್ನು ನರಕಕೂಪದಿಂದ ಉದ್ಧರಿಸಿದನು. ಮುವ್ವತ್ತಮೂರು ಅಪೂಪಗಳನ್ನು ದಾನಮಾಡಿದನು.

**ಅಧಿಮಾಸೇ ತು ಸಂಪ್ರಾಪ್ತೇ ಪಾಪಮುಕ್ತ್ಯೈ ಜನಾರ್ದನಂ ।**
**ದಾನೇನಾನೇನ ವಿಪ್ರೇಂದ್ರ ಸೂರ್ಯೋ ಮೇ ಪ್ರೀಯತಾಮಿತಿ ॥**

ದೋಸೆಯನ್ನು ದಾನಮಾಡುವುದು ಪಾಪಪರಿಹಾರಕವಾಗಿದೆ. ಸ್ತ್ರೀಯರೂ ಮಲಮಾಸವ್ರತವನ್ನು ಆಚರಿಸಿದರೆ ದಾರಿದ್ರ್ಯವಾಗಲೀ, ವೈಧವ್ಯವನ್ನಾಗಲೀ, ಪುತ್ರಶೋಕವನ್ನಾಗಲೀ ಹೊಂದುವುದಿಲ್ಲ.

**ಅಸಂಕ್ರಾಂತವ್ರತಂ ನಾರೀ ಯಾ ಕರೋತಿ ಹರಿಪ್ರಿಯಂ ।**
**ದಾರಿದ್ರ್ಯಂ ಪುತ್ರಶೋಕಂ ಚ ವೈಧವ್ಯಂ ನ ಭವೇತ್ ಸದಾ ॥**

ಹೀಗೆ ಅಧಿಕಮಾಸವು ಅಧಿಕಫಲವನ್ನು ಕೊಡುವುದರಿಂದ ಅಧಿಕಮಾಸವು ಅಧಿಕ ಫಲ ಕೊಡಲು ಸಮರ್ಥವಾಗಿದೆ.

ದೀಪದಾನದ ಮಾಹಾತ್ಮ್ಯೆಯನ್ನು ಅಗಸ್ತ್ಯ ಋಷಿಗಳು ಚಿತ್ರಬಾಹು ರಾಜನಿಗೆ ವಿವರಿಸಿ, ಅವನ ಪೂರ್ವವೃತ್ತಾಂತವನ್ನು ತಿಳಿಸುವರು. ಹಿಂದೆ ಮಣಿಗ್ರೀವನೆಂಬ ಶೂದ್ರ ನಾಸ್ತಿಕನಾಗಿ ದುರಾಚಾರಿಯಾಗಿದ್ದಾಗ ಉಗ್ರದೇವನೆಂಬ ಮಹಾಮುನಿಯನ್ನು ಸತ್ಕರಿಸಿ ಅವನಿಂದ ದೀಪದಾನದ ಮಹಿಮೆಯನ್ನು ಅರಿತು ದೀಪದಾನ ಮಾಡಿದ್ದಕ್ಕೆ ಪುರುಷೋತ್ತಮನಾದ ಶ್ರೀಹರಿಯ ಅನುಗ್ರಹದಿಂದ ಧರ್ಮಪರಾಯಣನಾಗಿ ರಾಜನಾದ.

**ಪೂರ್ವಸ್ಮಾನೋ ಮಣಿಗ್ರೀವೋ ಮೃಗಹಿಂಸಾಪರಾಯಣಃ**
**ಕೃತೇನ ದೀಪದಾನೇನ ಮಾಸೇ ಶ್ರೀಪುರುಷೋತ್ತಮೇ ।**
**ಇಂಗುದೀಜೇನತೈಲೇನ ಆಪರಾಜ್ಯಮಕಂಟಕಂ ॥**

ಇದಲ್ಲದೆ ದೃಢಧನ್ವೋಪಖ್ಯಾನ ಸುದೇವೋವ್ಯಾಖ್ಯಾನ, ಕದರ್ಯೋಪಖ್ಯಾನ, ನಿತ್ಯಾಹ್ನಿಕ ವರ್ಣನೆ, ಪತಿವ್ರತಾ ಧರ್ಮ ನಿರೂಪಣೆ ಇತ್ಯಾದಿ ನೀತಿಬೋಧಕ ಆಖ್ಯಾನಗಳು ಧರ್ಮಾಚರಣೆಗೆ ಸಾಧಕವಾಗಿವೆ.

ಅನಂತ ಪುಣ್ಯಪ್ರದವಾದ ಶ್ರೇಷ್ಠ ಅಧಿಕಮಾಸವು ಬಂದಾಗ ಮಾಹಾತ್ಮ್ಯ ಜ್ಞಾನಪೂರ್ವಕ ಸುದೃಢ ಸ್ನೇಹ (ಭಕ್ತಿ)ದಿಂದ ಪುರುಷೋತ್ತಮನ ಆರಾಧನಾ ಎಲ್ಲಾ ಸಜ್ಜನರು ಅವಶ್ಯ ಮಾಡಲೇಬೇಕು.

ಇಲ್ಲಿ ಹೇಳಿರುವ ಸ್ನಾನ, ದಾನ, ಪೂಜೆಗಳಿಗೆ ಚಾತುರ್ವರ್ಣದವರು ಅಧಿಕಾರಿಗಳೇ ಆಗಿರುತ್ತಾರೆ.

॥ ಪ್ರೀಣಯಾಮೋ ವಾಸುದೇವಂ ॥

॥ ಶ್ರೀಕೃಷ್ಣಾರ್ಪಣಮಸ್ತು ॥



# ಕೆ. ಸತ್ಯನಾರಾಯಣಾಚಾರ್ಯರು ಪ್ರಕಾಶಿಸಿರುವ ಗ್ರಂಥಗಳು

೧. **ಮಣಿಮಂಜರಿ**
(ಕನ್ನಡ ಅನುವಾದ, ವ್ಯಾಕರಣವಿಶೇಷಗಳಿಂದ ತೃತೀಯಾವೃತ್ತಿ)

೨. **ಅಂಭೃಣಿ ಸೂಕ್ತ**
(ಧೀರೇಂದ್ರತೀರ್ಥರ ವ್ಯಾಖ್ಯಾನಂ)

೩. **ದಶಾವತಾರಸ್ತವನ**
(ರಾಘವೇಂದ್ರಸ್ವಾಮಿಗಳ ಕೃತಿ)

೪. **ಸರ್ವಸಮರ್ಪಣಗದ್ಯ**
(ರಾಘವೇಂದ್ರಸ್ವಾಮಿಗಳ ಕೃತಿ)

೫. **ಜಯತೀರ್ಥಸ್ತುತಿ**
(ಸತ್ಯಪ್ರಿಯತೀರ್ಥ ಕೃತಿ)

೬. **ವಿಷ್ಣುಪಂಚಕನಿರ್ಣಯ**
(ಸಂಸ್ಕೃತ ಹಾಗೂ ಕನ್ನಡ)

೭. **ಸಟೀಕಾ ಸರ್ವಮೂಲ ಆದ್ಯಂತ ಶ್ಲೋಕಗಳು**

೮. **ಜಯಂತೀನಿರ್ಣಯ**

೯. **ಪುರಾಣೋಕ್ತ ವಿವಿಧ ಗೋದಾನ ಪದ್ಧತಿ**

೧೦. **ಸಂಕ್ಷಿಪ್ತ ಸದಾಚಾರ ಸ್ತೋತ್ರಾಣಿ**

**ಗ್ರಂಥ ಋಣ**

**೧. ಬೃಹನ್ನಾರದೀಯ ಪುರಾಣ**

**೨. ಧರ್ಮಶಾಸ್ತ್ರ ಗ್ರಂಥಗಳು**

**೩. ವಿದ್ವಾನ್ ಚತುರ್ವೇದಿ ವೇದವ್ಯಾಸಾಚಾರ್ಯರ ಚೈತ್ರಾದಿ ಮಾಸ ಕರ್ತವ್ಯಗಳು**